ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




**ಸಂಚಿಕೆ: 41 ಮಾರ್ಚ್ 2024** | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | **www.mahajana.edu.in** | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | **ಪುಟಗಳು: 06**

## ಸಂಪಾದಕೀಯ

### ಬೆಂಗಳೂರು ಅರಮನೆಯಲ್ಲಿ ಏನೇನುಂಟು..........?



ಬೆಂಗಳೂರು ಅರಮನೆಯು ಸದಾಶಿವನಗರ ಮತ್ತು ಜಯಮಹಲ್ ಮಧ್ಯದ, ನಗರದ ಹೃದಯ ಭಾಗವಾದ ಪ್ಯಾಲೇಸ್ ಗಾರ್ಡನ್‌ನಲ್ಲಿದೆ. ಈ ಕಟ್ಟಡ ನಿರ್ಮಾಣದ ಹಿಂದಿನ ಉದ್ದೇಶವು ಇದನ್ನು ಇಂಗ್ಲೆಂಡಿನ ವಿನ್ಸರ್ ಕ್ಯಾಸಲ್‌ನ ಹಾಗೆ ನಿರ್ಮಿಸಬೇಕೆಂಬುದಾಗಿತ್ತು. ಇದರ ಕಾಮಗಾರಿಯು 1862 ರಲ್ಲಿ ರೆವ್ ಗಾರೆಟ್ ಅವರಿಂದ ಪ್ರಾರಂಭವಾಯಿತು. ನಂತರ ಈ ಅತ್ಯದ್ಭುತವಾದ ವಿಶಿಷ್ಟ ವಿನ್ಯಾಸಗಳಿಂದ ಆಕರ್ಷಿತವಾಗಿ ರೂಪುಗೊಂಡಿರುವ ಅರಮನೆಯುನ್ನು ಮೈಸೂರಿನ ರಾಜವಂಶಸ್ಥರಾದ ಚಾಮರಾಜ ಒಡೆಯರ್ ಅವರು 1884 ರಲ್ಲಿ ಖರೀದಿಸಿದರು.

ದೊಡ್ಡ ದೊಡ್ಡ ಕಲ್ಲಿನಿಂದ ಕಟ್ಟಿರುವಂತಹ ಸುಂದರ ಅರಮನೆಯನ್ನು ನೋಡಿಯೇ ತಿಳಿಯಬೇಕು. ಹಿಂದಿನ ವೈಭವವನ್ನು ಕಾಣದ ನಮಗೆ ಇಲ್ಲಿರುವ ಪ್ರತಿಯೊಂದು ಸ್ಥಳವೂ, ವಸ್ತುಗಳು, ಚಿತ್ರಪಟಗಳು ಅಂದಿನ ಕಾಲಕ್ಕೆ ಕೊಂಡೊಯ್ಯುತ್ತವೆ. ಮಹಾರಾಜರು 1920ರ ಸುಮಾರಿಗೆ ಬೇಟೆಯಾಡುವಾಗ ವೇಲ್ಸ್‌ನ ರಾಜಕುಮಾರನೂ ಜೊತೆಯಲ್ಲಿರುವ ಚಿತ್ರ ಊಟಿಯಲ್ಲಿ ಮತ್ತು ಇತರ ಕಡೆಗಳಲ್ಲಿ ಬೇಟೆಯಾಡುತ್ತಿದ್ದ ಚಿತ್ರಗಳಿವೆ. 1954 ರಲ್ಲಿ ಜಯಚಾಮರಾಜ ಒಡೆಯರ್ ಅವರು 3100 ಹುಲಿಗಳನ್ನು ಕೊಂದಿದ್ದಾರೆ ಎನ್ನುತ್ತಾರೆ. ಈ ಗೃಹದಲ್ಲಿ ನಿಜವಾದ ಆನೆಯ ಮತ್ತು ಹುಲಿಗಳ ಪಾದಗಳಿಂದ, ಕಾಲುಗಳಿಂದ ಮಾಡಿರುವ ಕುರ್ಚಿ ಹಾಗೂ ಪೀಠಗಳಿವೆ. ಆನೆಯ ಸೊಂಡಿಲಿನ ಹೂದಾನಿಯೂ ಇದೆ. ಆನೆಗಳನ್ನು ಪಳಗಿಸುತ್ತಿದ್ದ ಸ್ಥಳದ ಚಿತ್ರಗಳು; ಆನೆಯ ಸವಾರಿ ಮತ್ತು ಯುದ್ಧ ಸಮಯದಲ್ಲಿ ಆನೆಯ ಮಹತ್ವದ ಚಿತ್ರಗಳೆಲ್ಲ ಪಟಗಳಲ್ಲಿ ಸೆರೆಯಾಗಿವೆ.

20ನೇ ಶತಮಾನದ ಚಿತ್ರಗಳು ಶ್ರೀಕಂಠದತ್ತ ರಾಜರ ಚಿಕ್ಕವಯಸ್ಸಿನ ಚಿತ್ರಪಟಗಳು ಅವರ ಅಕ್ಕ–ತಂಗಿಯರ ಜೊತೆ ಆಟವಾಡುತ್ತಿರುವ ಚಿತ್ರಪಟಗಳು, ಆಟವಾಡಲು ಬಳಸುತ್ತಿದ್ದ ವಸ್ತುಗಳು ಮತ್ತು ಮೆಡಲ್‌ಗಳಿವೆ.

ಅರಮನೆಯ ಮಹಾರಾಣಿ ಮತ್ತು ಇತರ ಹೆಣ್ಣು ಮಕ್ಕಳು ಹೆಚ್ಚಾಗಿ ಬೇಸಿಗೆ ಕಾಲದಲ್ಲಿ ಕಾಲ ಕಳೆಯುತ್ತಿದ್ದ ಸ್ಥಳದ ಮಧ್ಯಭಾಗದಲ್ಲಿ ಅಮೃತಶಿಲೆಯ ಕಾರಂಜಿಯನ್ನು ಒಳಗೊಂಡಿದೆ. ಮಹಾರಾಜರಿಗೆ ಮಾತ್ರ ಮೀಸಲಾಗಿದ್ದ ಗೃಹವಿದೆ. ಡಾಲ್ ಆಲ್ಫನ್ಸ್, ಸ್ಪೇನ್ ದೊರೆ 1931 ರಲ್ಲಿ ಭಾರತಕ್ಕೆ ಭೇಟಿಕೊಟ್ಟಾಗ ಈ ಅರಮನೆಗೂ ಬಂದು ಮಹಾರಾಜರ ಈ ಖಾಸಗಿ ಕೋಣೆ ಕಂಡು ಖುಷಿಪಟ್ಟಿದ್ದರಂತೆ. 3ನೇ ಕೃಷ್ಣರಾಜ ಒಡೆಯರ್ ಅವರು ರೇಸ್ ಕ್ಲಬ್ ಅನ್ನು ಪ್ರಾರಂಭಿಸಿದರು. ಇಲ್ಲಿ ದೊಡ್ಡದಾದ ಕುದುರೆ ಸವಾರನ ಪೆಟ್ಟಿಗೆಯಂತಹ ಸೋಫಾ ಇದೆ. ಬ್ರಿಟಿಷ್‌ನ 'ಇಲ್ಲಸ್ಟ್ರೇಟೆಡ್ ಪೇಪರ್' ನಲ್ಲಿ ಭಾರತದ ಹಬ್ಬಗಳ ಕುರಿತಾದ, ರಾಜರ ಮನೆತನಗಳ ಬಗ್ಗೆ ಅರಮನೆ ಬಗ್ಗೆ, ದೇವಸ್ಥಾನಗಳ ಬಗ್ಗೆ ಬರುತ್ತಿದ್ದಂತಹ ಸುದ್ದಿಗಳ ಸಂಗ್ರಹವನ್ನು ಚಿತ್ರಪಟದಂತೆ ಮಾಡಿ ತೂಗುಹಾಕಲಾಗಿದೆ. ಅರಮನೆಯ ಹೊರಭಾಗ ತೋಟಗಾರಿಕೆ, ರಾಜರು ಬಳಸುತ್ತಿದ್ದಂತಹ ಅನೇಕ ವಿಧದ ಕುದುರೆ ಗಾಡಿಗಳಿವೆ. ಬೃಹತ್ ಕಲ್ಲಿನಿಂದ ಕೆತ್ತಿರುವ ದೀಪಸ್ಥಂಭ ಜೊತೆಗೆ ದೊಡ್ಡದಾದ ಹಿತ್ತಾಳೆಯ ಹೂದಾನಿಯೂ ಇದೆ.

**ಅರಮನೆಯ ವಿಶೇಷತೆ**

- ಬೃಹತ್ 454 ಎಕರೆ ಜಾಗದ ಆವರಣ, ಇದರಲ್ಲಿ ಅರಮನೆಯ ವಿಸ್ತೀರ್ಣ ಒಂದು ಎಕರೆ (45,000 ಚದರ ಅಡಿ)
- 34 ಮಲಗುವ ಕೋಣೆಗಳು ಮತ್ತು ಈಜುಕೊಳ
- ಕೋಟೆಯ ಗಡಿಯಾರ ಗೋಪುರಗಳು

**ಪು.ತಿ.ನೋ.**



♦ ಮರದ ಕೆತ್ತನೆಗಳು, ವರ್ಣಚಿತ್ರಗಳು ಮತ್ತು ಚಿತ್ತಾರಗಳೊಂದಿಗೆ ಅಲಂಕಾರಗೊಂಡ ಸೊಗಸಾದ ಒಳಾಂಗಣ.

♦ ಅರಮನೆಯ ಹೊರಗಿನ ಗೋಡೆಯ ಮೇಲೆ ಹಬ್ಬಿರುವ ಹಸಿರು ಬಳ್ಳಿಗಳು ಕಟ್ಟಡಕ್ಕೆ ಸುಂದರ ನೋಟ ನೀಡಿವೆ.

♦ ಮರದ ಫ್ಯಾನ್ ಮತ್ತು ಆಮದು ಮಾಡಿದ ಕಲಾಕೃತಿಗಳು

♦ ಅರಮನೆಯ ಒಳಭಾಗಗಳನ್ನು ಅಂದಾಜು 21 ಭಾಗಗಳಾಗಿ ವಿಂಗಡಿಸಿದ್ದಾರೆ.

♦ ಪ್ರವೇಶದ್ವಾರ: ದೊಡ್ಡ ದೊಡ್ಡ ಕಲ್ಲುಗಳಿಂದ ನಿರ್ಮಾಣವಾಗಿರುವ ದ್ವಾರ ಬಾಗಿಲುಗಳು.

♦ ನ್ಯಾರೋಕೋಸ್ಟ್ : 5ನೇ ಚಾಮರಾಜ ಒಡೆಯರ್ ಅವರ ಅಮೃತಶಿಲೆಯ ಪ್ರತಿಮೆ ಇದೆ. ಪ್ರತಿಮೆಯ ಪಕ್ಕ ರಾಜರ ಲಾಂಛನವಾದ ಗಂಡಭೇರುಂಡ ಮತ್ತು ಸಿಂಹದ ದೇಹ ಆನೆಯ ತಲೆಯನ್ನು ಹೋಲುವ ಚಿತ್ರಗಳು ಇದೆ. ಬಾಗಿಲ ಮೇಲೆ ದೊಡ್ಡದಾದ ಆನೆಯ ಮುಖದ ಉಬ್ಬು ಶಿಲ್ಪ / ಮರದ ಕೆತ್ತನೆ ಇದೆ.

♦ ದೊಡ್ಡದಾದ ಹಾಲ್ : ಸುಂದರ ಕಂಬಗಳು, ಕಲಾಕೃತಿಯ ಮೇಲ್ಛಾವಣಿ ಇರುವ ಮನೋರಂಜನಾಸ್ಥಳ.

♦ ದರ್ಬಾರ್ ಹಾಲ್ : ಉನ್ನತ ಅಧಿಕಾರಿಗಳನ್ನು ಭೇಟಿ ಮಾಡುತ್ತಿದ್ದಂತಹ ಸ್ಥಳ ಮತ್ತು ನೊಂದವರಿಗೆ ನ್ಯಾಯ ಒದಗಿಸುತ್ತಿದ್ದ ಸ್ಥಳ. ಇಲ್ಲಿ ಬಂಗಾರದ ಕಟ್ಟು ಹಾಕಿರುವ ದೊಡ್ಡದಾದ ನಿಲುವುಗನ್ನಡಿ ಹಾಗೂ ರಾಣಿಯರು ಕುಳಿತು ರಾಜರ ದರ್ಬಾರನ್ನು ವೀಕ್ಷಿಸಲು ಸ್ಥಳವನ್ನು ಹೊಂದಿದೆ.

♦ ಮಹಾರಾಜರು ರಾಣಿಯವರ ಖಾಸಗಿ ಕೋಣೆಗೆ ತೆರಳುವಲ್ಲಿ ರೋಜ್‌ವುಡ್‌ನಿಂದ ನಿರ್ಮಿಸಲಾದ ಹೂವಿನಾಕೃತಿಯ ಮೆಟ್ಟಿಲುಗಳಿವೆ.

ರಾಜಕುಮಾರರು, ರಾಜಕುಮಾರಿಯರು ಅವರವರ ಸ್ನೇಹಿತರೊಂದಿಗೆ ಕಾಲ ಕಳೆಯುತ್ತಿದ್ದ ಸ್ಥಳಗಳು. ಇಲ್ಲಿ 1616ರ ಇಸವಿ ಚಿತ್ರದಿಂದ 1744ರ ಇಸವಿಯ ಕ್ಲಿಯೋಪಾತ್ರಾಳ ಚಿತ್ರ ಮತ್ತು ಜೀವನ ಚರಿತ್ರೆ ಹೇಳುವ ಚಿತ್ರಪಟಗಳಿವೆ. 1740 ರಲ್ಲಿ ರಚಿಸಿದ 'ದಿ ಬರ್ತ್ ಆಫ್ ವೀನಸ್'ಳ ಕಥೆಯನ್ನು ಹೇಳುವ ಚಿತ್ರಗಳಿವೆ.

**– ಡಾ. ಶ್ರೀಧರ ಹೆಚ್**
ಶೈಕ್ಷಣಿಕ ಡೀನ್
ಹಾಗೂ
ಮುಖ್ಯಸ್ಥರು, ಇತಿಹಾಸ ವಿಭಾಗ

## ಸಂತ ಗುರು – ಶ್ರೀ ರಾಮಕೃಷ್ಣ ಪರಮಹಂಸ



ರಾಮಕೃಷ್ಣ ಪರಮಹಂಸರು (ಸಾ.ಶ.1836–1886) 19ನೇ ಶತಮಾನದ ಭಾರತದ ಪ್ರಸಿದ್ಧ ಸಂತರು. ಅವರು ಫೆಬ್ರವರಿ 18, 1836 ರಂದು ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಕಮರ್ಪುರ್ ಗ್ರಾಮದಲ್ಲಿ ಅತ್ಯಂತ ಬಡ, ನಿಷ್ಠಾವಂತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಅವರು ಕಾಳಿ ದೇವಿಗೆ ಸಮರ್ಪಿತವಾದ ದಕ್ಷಿಣೇಶ್ವರ ಕಾಳಿ ದೇವಾಲಯದ ಅರ್ಚಕರಾದರು. ಭಕ್ತಸಂತರಲ್ಲಿ ರಾಮಕೃಷ್ಣ ಪರಮಹಂಸರು ಪ್ರಸಿದ್ಧರಾಗಿದ್ದಾರೆ. ಅವರ ಪೂರ್ಣ ಹೆಸರು ಗದಾಧರ ಚಟ್ಟೋಪಾಧ್ಯಾಯ.

ರಾಮಕೃಷ್ಣರು ಶಾರದಾದೇವಿಯನ್ನು ವಿವಾಹವಾದರು. ಸ್ವಾಮಿ ವಿವೇಕಾನಂದರು ಅವರ ಪ್ರಸಿದ್ಧ ಶಿಷ್ಯರಲ್ಲಿ ಒಬ್ಬರು. ತಮ್ಮ ಗುರುವಿನ ಗೌರವಾರ್ಥವಾಗಿ, ಸ್ವಾಮಿವಿವೇಕಾನಂದರು ರಾಮಕೃಷ್ಣ ಮಠವನ್ನು ಸ್ಥಾಪಿಸಿದರು. ಇದು "ರಾಮಕೃಷ್ಣ ಚಳುವಳಿ" ಎಂದು ಕರೆಯಲ್ಪಡುವ ಆಧ್ಯಾತ್ಮಿಕ ಆಂದೋಲನವನ್ನು ವಿಶ್ವದಾದ್ಯಂತ ಹರಡಿತು. ಬೇಲೂರು ಮಠವು ರಾಮಕೃಷ್ಣ ಮಠ ಮತ್ತು ಮಿಷನ್‌ನ ಪ್ರಧಾನ ಕಛೇರಿಯಾಗಿದೆ. ಹಿಂದೂ ಚಾಂದ್ರಮಾನ ಪಂಚಾಂಗದ ಪ್ರಕಾರ ಶ್ರೀ ರಾಮಕೃಷ್ಣರು ಜನಿಸಿದ್ದು ವಿಕ್ರಮ ಸಂವತ್ಸರದ ಫಾಲ್ಗುಣ, ಶುಕ್ಲಪಕ್ಷದ ದ್ವಿತೀಯದಂದು, ಪ್ರತಿವರ್ಷ ರಾಮಕೃಷ್ಣ ಜನ್ಮ ದಿನಾಚರಣೆಯನ್ನು ಹಿಂದೂ ಚಂದ್ರಮಾನ ಕ್ಯಾಲೆಂಡರ್ ಪ್ರಕಾರ ಎಲ್ಲಾ ರಾಮಕೃಷ್ಣ ಮಠಗಳಲ್ಲಿ ಭಕ್ತಿಪೂರ್ವಕವಾಗಿ ಆಚರಿಸಲಾಗುತ್ತದೆ.

**ಕೃಷ್ಣ ಹಂಪನ**
ದ್ವಿತೀಯ ಬಿ.ಎ.



## ಮೈಸೂರು ಒಡೆಯರ ವಂಶಾವಳಿ

| ಕ್ರ.ಸಂ. | ಹೆಸರು | ಜನನ | ಪಟ್ಟಾಭಿಷೇಕ | ನಿಧನ |
|---|---|---|---|---|
| 1. | ಯದುರಾಯರು (ವಿಜಯ) | 1371 | 1399 | 1423 |
| 2. | ಹಿರಿಯಬೆಟ್ಟ ಚಾಮರಾಜ ಒಡೆಯರು | 1408 | 1423 | 1459 |
| 3. | ತಿಮ್ಮರಾಜ ಒಡೆಯರು | 1433 | 1459 | 1478 |
| 4. | ಹಿರಿಯ ಚಾಮರಾಜ ಒಡೆಯರ್ (ಅರ್ಬೆರಳು) | 1463 | 1478 | 1513 |
| 5. | ಹಿರಿಯ ಬೆಟ್ಟ ಚಾಮರಾಜ ಒಡೆಯರು | 1492 | 1513 | 1553 |
| 6. | ತಿಮ್ಮರಾಜ ಒಡೆಯರು (ಅಪ್ಪಣ) | 1511 | 1553 | 1572 |
| 7. | ಬೋಳ ಚಾಮರಾಜ ಒಡೆಯರು | 1518 | 1572 | 1576 |
| 8. | ಬೆಟ್ಟದ ಚಾಮರಾಜ ಒಡೆಯರು | 1550 | 1576 | 1578 |
| 9. | ರಾಜ ಒಡೆಯರು | 1552 | 1578 | 1617 |
| 10. | ಚಾಮರಾಜ ಒಡೆಯರು | 1606 | 1617 | 1637 |
| 11. | ಇಮ್ಮಡಿ ರಾಜ ಒಡೆಯರು | 1617 | 1637 | 1638 |
| 12. | ರಣಧೀರ ಕಂಠೀರವ ನರಸರಾಜ ಒಡೆಯರು | 1615 | 1638 | 1659 |
| 13. | ದೊಡ್ಡದೇವರಾಜ ಒಡೆಯರು | 1627 | 1659 | 1673 |
| 14. | ಚಿಕ್ಕದೇವರಾಜ ಒಡೆಯರು | 1645 | 1673 | 1704 |
| 15. | ಕಂಠೀರವ ಮಹಾರಾಜ ಒಡೆಯರು | 1673 | 1704 | 1714 |
| 16. | ದೊಡ್ಡಕೃಷ್ಣರಾಜ ಒಡೆಯರು | 1702 | 1714 | 1732 |
| 17. | ಚಾಮರಾಜ ಒಡೆಯರು | 1704 | 1732 | 1734 |
| 18. | ಇಮ್ಮಡಿ ಕೃಷ್ಣರಾಜ ಒಡೆಯರು | 1728 | 1734 | 1766 |
| 19. | ನಂಜರಾಜ ಒಡೆಯರು | 1762 | 1766 | 1770 |
| 20. | ಬೆಟ್ಟದ ಚಾಮರಾಜ ಒಡೆಯರು | 1759 | 1770 | 1776 |
| 21. | ಖಾಸಾ ಚಾಮರಾಜ ಒಡೆಯರು | 1774 | 1776 | 1796 |
| 22. | ಮುಮ್ಮಡಿ ಕೃಷ್ಣರಾಜ ಒಡೆಯರು | 1794 | 1799 | 1868 |
| 23. | ಹತ್ತನೇ ಚಾಮರಾಜೇಂದ್ರ ಒಡೆಯರು | 1863 | 1868 | 1894 |
| 24. | ನಾಲ್ವಡಿ ಕೃಷ್ಣರಾಜ ಒಡೆಯರು | 1884 | 1894 | 1940 |
| 25. | ಜಯಚಾಮರಾಜ ಒಡೆಯರು | 1919 | 1940 | 1974 |
| 26. | ಶ್ರೀಕಂಠದತ್ತ ನರಸಿಂಹರಾಜ ಒಡೆಯರು | 1953 | 1974 | 2013 |

**ಕು. ರಕ್ಷಿತ**
ಅಂತಿಮ ಬಿ.ಎ.



# Visited to 'Exhibition of Historical Records and Rare Photographs'

## Vidyavardhaka Fist Grade College, Mysuru - 19.2.2024











**Special Lecture: 20.2.2024**
**Topic: China & Japan in Modern Asia**
**Resource Person: Dr. Venkategowda, HoD of History, Vijaya First Grade College, Pandavapura, Mandya Dist.**










# Visited to Mysore Rail Museum - 21.2.2024



ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 42 ಏಪ್ರಿಲ್ 2024 ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು www.mahajana.edu.in ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ ಪುಟಗಳು: 10

## ಸಂಪಾದಕೀಯ

### ಶಾಸನ ಪರಿಚಯ

'ಶಾಸನ' ಎಂಬುದು ಸಂಸ್ಕೃತದ 'ಶಾಸ್' ಎಂಬ ಪದದಿಂದ ಬಂದಿದೆ. ಇದಕ್ಕೆ 'ವಿಧಿಸು', 'ರಾಜಾಜ್ಞೆ', 'ಕಾನೂನು' ಮುಂತಾಗಿ ಅರ್ಥಗಳಿವೆ.

ಶಾಸನಕ್ಕೆ ಇಂಗ್ಲೀಷ್‌ನಲ್ಲಿ Inscription ಎಂಬ ಸಂವಾದಿಪದವಿದೆ. Inscribe ಎಂದರೆ 'ಕೆತ್ತು'. Inscription ಎಂದರೆ ಕೆತ್ತಲ್ಪಟ್ಟಿದ್ದು ಅಥವಾ ಕೊರೆಯಲ್ಪಟ್ಟದ್ದು ಎಂಬ ಅರ್ಥವಿದೆ. ಇದಕ್ಕೆ ಸಮಾನಾರ್ಥಕವಾಗಿ Epigraph ಎಂಬ ಪದ ಪ್ರಯೋಗವೂ ಇದೆ. ಶಾಸನ ಪತ್ರದಲ್ಲಿ ರಾಜನ ಸ್ವಂತ ರುಜುವೂ ಆಜ್ಞೆ ಹೊರಟ ದಿನಾಂಕ ಇರಬೇಕು. ಲೇಖನದ ಮೂಲಕ ಆಜ್ಞೆ ಮಾಡದ ರಾಜ, ರಾಜನ ಆಜ್ಞಾ ಪತ್ರವಿಲ್ಲದೆ ಅಧಿಕಾರ ನಡೆಸುವ ಅಧಿಕಾರಿ ಇಬ್ಬರೂ ಚೋರರು; ರಾಜ ಮುದ್ರಾ ಸಹಿತವಾದ ಲೇಖನವೇ ನಿಜವಾದ ರಾಜ– ಬರಿಯ ರಾಜ ರಾಜನೇ ಅಲ್ಲ. ಹೀಗೆಂದು ಸ್ಮೃತಿಗ್ರಂಥವೊಂದು ಹೇಳುತ್ತದೆ.

ಸಾಮಾನ್ಯವಾಗಿ ನಾಶವಾಗುವಂತಹ ತಾಳೆಗರಿ, ಭೂರ್ಜಪತ್ರ, ಕಾಗದ ಮೊದಲಾದವುಗಳ ಮೇಲಿನ ಬರಹಗಳನ್ನು ಬಿಟ್ಟು ಬಹುಕಾಲ ಉಳಿಯುವಂತಹ ಶಿಲೆ, ಲೋಹ ಮೊದಲಾದವುಗಳು ಮೇಲಿನ ಬರಹವನ್ನು ಶಾಸನವೆಂದು ಕರೆಯುತ್ತಾರೆ.

ಒಂದು ಕಾಲಕ್ಕೆ ಗಟ್ಟಿಯಾದ ವಸ್ತುವಿನ ಮೇಲೆಯಷ್ಟೇ ಬರೆದ ದೀರ್ಘಕಾಲ ಉಳಿಯಬಲ್ಲ ಬರವಣಿಗೆಯನ್ನು ಮಾತ್ರವೇ ಶಾಸನವೆಂದು ಕರೆಯಬೇಕೆಂಬ ಅಭಿಪ್ರಾಯವನ್ನು ತಳೆದಿದ್ದವರು, ಬರುಬರುತ್ತಾ ತಮ್ಮ ನಿಲುವನ್ನು ಸಡಿಲಿಸಬೇಕಾಯಿತು. ಕಾಲಕ್ರಮದಲ್ಲಿ ಬರೆವಣಿಗೆಗೆ ಬಳಸುವ ಎಲ್ಲಾ ವಸ್ತುಗಳ ಮೇಲೂ ಶಾಸನಗಳನ್ನು ಬರೆಸುವ ರೂಢಿ ಪ್ರಾರಂಭವಾಯಿತು.

ಭಾರತದಲ್ಲಿರುವಷ್ಟು ಶಾಸನ ಸಂಪತ್ತು ಪ್ರಪಂಚದಲ್ಲಿ ಬೇರೆ ಯಾವ ದೇಶದಲ್ಲಿಯೂ ಇಲ್ಲವೆಂದು ಹೇಳಬಹುದು. ನಮ್ಮ ದೇಶದಲ್ಲಿ ಇದುವರೆಗೆ ಸುಮಾರು ಒಂದು ಲಕ್ಷ ಶಾಸನಗಳು ದೊರೆತಿವೆ ಎಂದು ಅಂದಾಜು ಮಾಡಲಾಗಿದೆ. ಇವುಗಳ ಪೈಕಿ ಕರ್ನಾಟಕದಲ್ಲಿ ಸುಮಾರು 20,000 ಕ್ಕಿಂತಲೂ ಹೆಚ್ಚು ಶಾಸನಗಳು ದೊರೆತಿದ್ದು, ತಮಿಳುನಾಡನ್ನು ಬಿಟ್ಟರೆ ಕರ್ನಾಟಕದಲ್ಲಿರುವಷ್ಟು ಶಾಸನ ಸಂಪತ್ತು ಬೇರೆ ಯಾವ ರಾಜ್ಯದಲ್ಲಿಯೂ ಸಿಕ್ಕಿಲ್ಲ. ಇದರ ಸಂಶೋಧನಾ ಕಾರ್ಯ ಎಂದಿಗೂ ಮುಗಿಯುವಂತದ್ದಲ್ಲ, ಶಾಸನಗಳ ಪತ್ತೆ ಮತ್ತು ಸಂಗ್ರಹಕಾರ್ಯ ನಿರಂತರವಾದುದು.

ಭಾರತದ ಇತಿಹಾಸವನ್ನಾಗಲೀ ಕರ್ನಾಟಕದ ಇತಿಹಾಸವನ್ನಾಗಲೀ ಪುನಾರಚಿಸಬೇಕಾದರೆ ಶಾಸನಗಳ ಮೊರೆ ಹೋಗದೆ ಗತ್ಯಂತರವಿಲ್ಲ. ಇತಿಹಾಸ ರಚನೆಗೆ ಕಾವ್ಯಗಳು, ವಿದೇಶಿ ಪ್ರವಾಸಗಳ ಬರಹಗಳು ಇತ್ಯಾದಿಗಳಿರಬಹುದಾದರೂ ಅವು ಶಾಸನಗಳಷ್ಟು ಪ್ರಮಾಣವಲ್ಲ. ಭಾರತದಲ್ಲಿ ಕ್ರಮಬದ್ಧವಾದ ಶಾಸನ ವ್ಯಾಸಂಗ ಆರಂಭವಾದುದು ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ಕ್ರಿ.ಶ.1784 ರಲ್ಲಿ ಸರ್ ವಿಲಿಯಂ ಜೋನ್ಸ್ ಎಂಬುವವನು 'ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಎಂಬ ಸಸ್ಥೆಯನ್ನು ಇತರರ ನೆರವಿನೊಂದಿಗೆ ಸ್ಥಾಪಿಸಿದನು. ಈ ಸಂಸ್ಥೆಯ ಗುರಿ ಭಾರತಕ್ಕೆ ಸಂಬಂಧಿಸಿದ ಇತಿಹಾಸ, ಕಾವ್ಯ, ಪುರಾಣ ಎಲ್ಲವನ್ನೂ ಸುಸಂಬದ್ಧವಾಗಿ ಅಧ್ಯಯನ ಮಾಡುವುದು. ಜೇಮ್ಸ್ ಪ್ರಿನ್ಸೆಫ್ ಎಂಬುವನು 1877–78 ರಲ್ಲಿ ಬ್ರಾಹ್ಮೀಲಿಪಿಯನ್ನು ಸಮರ್ಪಕವಾಗಿ ಓದಿದನು. ಉತ್ತರ ಭಾರತದಲ್ಲಿ ದೊರೆತ ಕೆಲವು ಗ್ರೀಕ್ ಮತ್ತು ಬ್ರಾಹ್ಮೀ ಲಿಪಿಗಳಲ್ಲಿ ಅಲೇಖ್ಯ (ನಾಣ್ಯಗಳ ಮೇಲಿನ ಬರಹ) ಸಿಕ್ಕಿತು. ಅದನ್ನು ಓದುವ ಪ್ರಯತ್ನವನ್ನು ಜೇಮ್ಸ್ ಪ್ರಿನ್ಸೆಫ್ ಮಾಡಿದರು. ಹೀಗೆ ಜೇಮ್ಸ್ ಪ್ರಿನ್ಸೆಫ್‌ನ ಅವಿರತ ಪ್ರಯತ್ನದಿಂದಾಗಿ ಬ್ರಾಹ್ಮೀಲಿಪಿಯ ರಹಸ್ಯ ಬಯಲಾಗಿ ಅಶೋಕನ ಶಾಸನಗಳ ಅಧ್ಯಯನ ಸುಗಮವಾಯಿತು.

ಕರ್ನಾಟಕದಲ್ಲಿ ಶಾಸನಗಳ ಸಂಗ್ರಹಕಾರ್ಯ 19ನೆಯ ಶತಮಾನದಲ್ಲಿ ಆರಂಭವಾಯಿತೆಂದು ಹೇಳಬಹುದು. ಮೆಕೆಂಝಿ ಎಂಬ ವಿದ್ವಾಂಸರು ಅನೇಕ ತಾಮ್ರ ಪಟಗಳನ್ನು, ಶಿಲಾಶಾಸನಗಳನ್ನು ಸಂಗ್ರಹಿಸಿ ಪರಿಶೀಲಿಸಿದವರಲ್ಲಿ ಮೊದಲಿಗರು. 20ನೆಯ ಶತಮಾನದ ಆದಿಭಾಗದಲ್ಲಿ ವಾಲ್ಟರ್, ಇಲಿಯೆಟ್, ವಥೆನ್, ಬರ್ಜೆಸ್, ರೈಸ್, ಫ್ಲೀಟ್, ಹುಲ್ಫ್ ಮೊದಲಾದ ಭಾರತೀಯ ವಿದ್ವಾಂಸರು ಶಾಸನ ಸಂಗ್ರಹ ಹಾಗೂ ಅಧ್ಯಯನದಲ್ಲಿ ಮಹತ್ವದ ಪಾತ್ರವಹಿಸಿದರು. ಈ ಕಾರ್ಯದಲ್ಲಿ ಬಿ.ಎಲ್.ರೈಸ್ ಮತ್ತು ಜೆ.ಎಫ್. ಫ್ಲೀಟ್ ಅವರು ಅಗ್ರಸ್ಥಾನ ಪಡೆದಿದ್ದಾರೆ.

ಭಾರತದ ಇತರ ಭಾಗಗಳಂತೆ ಕರ್ನಾಟಕದಲ್ಲಿಯೂ ಇದುವರೆಗೆ ದೊರೆತ ಅತ್ಯಂತ ಪ್ರಾಚೀನವಾದವು ಅಶೋಕನ ಶಾಸನಗಳು.

**ಪು.ತಿ.ನೋ.**


ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರ ಎಂಬ ಸ್ಥಳಗಳಲ್ಲಿ ಮೂರು ಶಾಸನಗಳು, ರಾಯಚೂರು ಜಿಲ್ಲೆಯ ಮಸ್ಕಿ, ಗವಿಮಠ ಮತ್ತು ಪಾಲ್ಕಿಗೋಂಡ ಎಂಬಲ್ಲಿ ಮೂರು ಅಶೋಕನ ಶಾಸನಗಳು ಸಿಕ್ಕಿವೆ.


ಕರ್ನಾಟಕದ ಶಾಸನಗಳು ಬಂಡೆಗಳ ಮೇಲೆ, ನೆಟ್ಟ ಕಲ್ಲುಗಳ ಮೇಲೆ, ದೇವಾಲಯದ ಸ್ತಂಭ, ಗೋಡೆ, ಛಾವಣಿ, ಆಸ್ತಿಭಾರ, ತೊಲೆ, ಬೋದಿಗೆ, ಬಾಗಿಲುವಾಡ ಮತ್ತಿತರ ಭಾಗಗಳಲ್ಲಿ ಕೆತ್ತಲ್ಪಟ್ಟಿವೆ. ಅಲ್ಲದೆ ತಾಮ್ರ ಶಾಸನಗಳೂ ವಿಪುಲವಾಗಿ ದೊರೆಯುತ್ತವೆ. ಕಂಚಿನ ಹಾಗೂ ಶಿಲೆಯ ವಿಗ್ರಹಗಳ ಪಾದ ಪೀಠಗಳ ಮೇಲೂ ಶಾಸನಗಳನ್ನು ಕೊರೆಯಲಾಗಿದೆ.

ಶಾಸನಗಳು ಹಲವಾರು ಕಾರಣಗಳಿಗಾಗಿ ಮಹತ್ವವನ್ನು ಪಡೆಯುತ್ತವೆ. ಬರಹರೂಪದ ಇತರ ಆಧಾರಗಳಿಗಿಂತ ಶಾಸನರೂಪದ ಬರವಣಿಗೆಯ ದಾಖಲೆಯು ಹೆಚ್ಚು ವಿಶ್ವಸಾರ್ಹವಾದದ್ದು. ಚರಿತ್ರೆಯ ರಚನೆಯಲ್ಲಿ ವಂಶಾವಳಿ ಅಥವಾ ಇತಿ ವೃತ್ತಗಳು, ಪುರಾಣಗಳು ಹಾಗೂ ಅಧಿಕೃತ ದಾಖಲೆಗಳನ್ನು ಮುಖ್ಯವಾಗಿ ಆಶ್ರಯಿಸಲಾಗುತ್ತದೆ. 'ಹಿಂದೂ ಜನಾಂಗದ ಅಧಿಕೃತ ಚರಿತ್ರೆ ಇಲ್ಲದಿರುವಾಗ ಆಕಸ್ಮಿಕಗಳ ಮೂಲಕ ಆಗಾಗ ಪತ್ತೆಯಾಗುವ ಎಲ್ಲಾ ಅಸಲೀ ಸ್ಮಾರಕಗಳಿಗೆ ವಿಶೇಷವಾಗಿ ಶಿಲಾಶಾಸನ, ಲೋಹ ಶಾಸನಗಳಿಗೆ ನ್ಯಾಯವಾಗಿ ಪ್ರಾಮುಖ್ಯತೆ ಸಲ್ಲುತ್ತದೆ ಎಂದು ಕೋಲ್ ಬ್ರೂಕ್ ಎಂಬ ವಿದ್ವಾಂಸ ಅಭಿಪ್ರಾಯಪಟ್ಟಿದ್ದಾರೆ. ಜೆ.ಎಫ್.ಫ್ಲೀಟ್ ಅವರು "ವಿಶೇಷವಾಗಿ ಭರತ ಖಂಡ ಶಾಸನ ರೂಪದ ಅವಶೇಷಗಳಲ್ಲಿ ಶ್ರೀಮಂತವಾಗಿರುವುದು ಮಾತ್ರವಲ್ಲದೇ ಆ ಶಾಸನಗಳೇ ಈ ದೇಶದ ಪ್ರಾಚ್ಯಯುಗ ಸಂಬಂಧವಾದ ಎಲ್ಲಾ ಸಂಶೋಧನಾ ಪಥಗಳಲ್ಲಿ ಐತಿಹಾಸಿಕ ಫಲಿತಾಂಶಗಳಿಗೆ ಖಚಿತವಾದ ಏಕಮಾತ್ರ ಬುನಾದಿ" ಎಂಬ ಅಭಿಪ್ರಾಯಪಟ್ಟಿದ್ದಾರೆ.


**– ಡಾ. ಶ್ರೀಧರ ಹೆಚ್**
ಶೈಕ್ಷಣಿಕ ಡೀನ್
ಹಾಗೂ
ಮುಖ್ಯಸ್ಥರು, ಇತಿಹಾಸ ವಿಭಾಗ
















# ವಂದೇ ಮಾತರಂ – ಬಂಕಿಮಚಂದ್ರ ಚಟ್ಟೋಪಾಧ್ಯಾಯ



ಬಂಕಿಮ ಚಂದ್ರ ಚಟ್ಟೋಪಾಧ್ಯಾಯ ಬಂಗಾಳಿ ಕವಿ, ಕಾದಂಬರಿಕಾರ, ಪ್ರಬಂಧಕಾರ ಮತ್ತು ಪತ್ರಕರ್ತರಾಗಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟಗಾರರನ್ನು ಪ್ರೇರೇಪಿಸಿದ ವಂದೇ ಮಾತರಂ ಗೀತೆಯ ಕವಿಯಾಗಿ ಇವರು ಅತ್ಯಂತ ಪ್ರಸಿದ್ಧರಾಗಿದ್ದರು. ಇದೇ ಗೀತೆಯು ನಂತರದಲ್ಲಿ ಭಾರತದ ರಾಷ್ಟ್ರೀಯ ಗೀತೆಯಾಗಿ ಘೋಷಿಸಲ್ಪಟ್ಟಿತು.

ಬಂಗಾಳ, ಅಷ್ಟೇ ಏಕೆ ಭಾರತದ ಸಾಹಿತ್ಯಿಕ ಪುನರುದಯದಲ್ಲಿನ ಓರ್ವ ಪ್ರಮುಖ ವ್ಯಕ್ತಿಯಾಗಿ ಚಟರ್ಜಿಯವರನ್ನು ವ್ಯಾಪಕವಾಗಿ ಪರಿಗಣಿಸಲಾಗುತ್ತದೆ. ಕಾದಂಬರಿಗಳು, ಪ್ರಬಂಧಗಳು ಮತ್ತು ವ್ಯಾಖ್ಯಾನಗಳನ್ನು ಒಳಗೊಂಡಂತಿರುವ ಅವರ ಕೆಲವೊಂದು ಬರಹಗಳು ಸಾಂಪ್ರದಾಯಿಕವಾದ ಛಂದೋಬದ್ಧ ಪದ್ಯ–ಉದ್ದೇಶಿತ ಭಾರತೀಯ ಬರಹಗಳಿಗಿಂತ ವಿಭಿನ್ನವಾದ ಒಂದು ಹೊರಳುದಾರಿಯನ್ನು ತುಳಿದವು, ಮತ್ತು ಭಾರತದ ಉದ್ದಗಲಕ್ಕೂ ಇರುವ ಲೇಖಕರಿಗೆ ಸಂಬಂಧಿಸಿದಂತೆ ಒಂದು ಪ್ರೇರಣೆಯನ್ನು ಒದಗಿಸಿದವು.

ಬಂಕಿಮಚಂದ್ರ ಚಟ್ಟೋಪಾಧ್ಯಾಯರು (ಜನನ–ಜೂನ್ 27, 1838, ಮರಣ–ಏಪ್ರಿಲ್ 8 1894) ಜನಿಸಿದ ಸ್ಥಳ ನೈಹತಿಯಲ್ಲಿರುವ ಕಂಥಾಲಪಾರ ಎಂಬ ಹಳ್ಳಿ. 1857ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದ ಮೊದಲ ಇಬ್ಬರು ಪದವೀಧರರ ಪೈಕಿ ಅವರು ಒಬ್ಬರಾಗಿದ್ದರು. 1869ರಲ್ಲಿ ಒಂದು ಕಾನೂನು ಪದವಿಯನ್ನು ಗಳಿಸಿದರು. ಮುಂದೆ ತಮ್ಮ ತಂದೆಯ ರೀತಿಯಲ್ಲಿಯೇ ಜೆಸ್ಸೋರ್‌ನ ಉಪ–ಜಿಲ್ಲಾಧಿಕಾರಿಯಾಗಿ ನೇಮಿಸಲ್ಪಟ್ಟರು.

ಓರ್ವ ಉಪ ನ್ಯಾಯಾಧಿಪತಿಯ ಹುದ್ದೆಗೇರಿದ ಚಟರ್ಜಿಯವರು 1891ರಲ್ಲಿ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದರು. ಆಡಳಿತ ನಡೆಸುತ್ತಿದ್ದ ಬ್ರಿಟಿಷರೊಂದಿಗೆ ಘರ್ಷಣೆಗೆ ಇಳಿಯಲು ಕಾರಣವಾಗುವಂಥ ಘಟನೆಗಳು ಅವರು ತಮ್ಮ ಕಾರ್ಯಕ್ಷೇತ್ರದಲ್ಲಿದ್ದಾಗಿನ ವರ್ಷಗಳಲ್ಲಿ ದಟ್ಟವಾಗಿ ತುಂಬಿಕೊಂಡಿದ್ದವು.

ಭಾರತದ ಸಾಹಿತ್ಯಿಕ ಪುನರುದಯದಲ್ಲಿನ ಓರ್ವ ಪ್ರಮುಖ ವ್ಯಕ್ತಿಯಾಗಿ ಚಟರ್ಜಿಯವರನ್ನು ವ್ಯಾಪಕವಾಗಿ ಪರಿಗಣಿಸಲಾಗುತ್ತದೆ. ಕಾದಂಬರಿಗಳು, ಪ್ರಬಂಧಗಳು ಮತ್ತು ವ್ಯಾಖ್ಯಾನಗಳನ್ನು ಒಳಗೊಂಡಂತಿರುವ ಅವರ ಕೆಲವೊಂದು ಬರಹಗಳು ಸಾಂಪ್ರದಾಯಿಕವಾದ ಛಂದೋಬದ್ಧ ಪದ್ಯ–ಉದ್ದೇಶಿತ ಭಾರತೀಯ ಬರಹಗಳಿಗಿಂತ ವಿಭಿನ್ನವಾದ ಒಂದು ಹೊರಳುದಾರಿಯನ್ನು ತುಳಿದವು, ಮತ್ತು ಭಾರತದ ಉದ್ದಗಲಕ್ಕೂ ಇರುವ ಲೇಖಕರಿಗೆ ಸಂಬಂಧಿಸಿದಂತೆ ಒಂದು ಪ್ರೇರಣೆಯನ್ನು ಒದಗಿಸಿದವು.

“ಆನಂದಮಠ” ಕಾದಂಬರಿಯಲ್ಲಿ ಬರೆದ ‘ಓ ತಾಯಿ, ಭಾರತಿಯೇ, ನಿನಗೆ ನಮನ’ ಎಂದು ಸಾರುವ ‘ವಂದೇ ಮಾತರಂ’ ಭಾರತೀಯರಿಗೆ ಪವಿತ್ರ ಗೀತೆಯಂತಿದೆ. ಬಂಕಿಮಚಂದ್ರರ ‘ವಂದೇ ಮಾತರಂ’ ಗೀತೆ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಅದ್ಭುತ ಸಾಹಸಗಳಿಗೆ, ಸಹಸ್ರಾರು ಜನರ ತ್ಯಾಗ ಬಲಿದಾನಗಳಿಗೆ ಪ್ರೇರಣೆ ನೀಡಿತು. ಸ್ವಾತಂತ್ರ್ಯದ ರಣಮಂತ್ರವೇ ಆಯಿತು. ಇಡೀ ಭಾರತದ ಅಂತಃಕರಣವೇ ದೇಶಭಕ್ತಿಯ ಭಾವನೆಗಳಿಗೆ ಸ್ಪಂದಿಸುವಂತೆ ಮಾಡಿತು. ಇಂದಿಗೂ ದೇಶಭಕ್ತರ ಮೈ–ಮನ ಪುಳಕಿತಗೊಳಿಸುವ ಗೀತೆ ಇದು. ನಮ್ಮ ಸಂಸ್ಕೃತಿಯ ಸೌರಭ ಹೊರಸೂಸುವ ನುಡಿಸುಮ. ಈ ನೆಲದ ಸಂತಾನಕ ವಿದ್ಯೆ–ಬುದ್ಧಿಗಳೇ ಸಂಪತ್ತು ಸಮೃದ್ಧಿಗಳ, ಸಾಧನೆ ಸಿದ್ಧಿಗಳ ವಿಕಾಸಕ್ಕೆ ಆವಾಹನೆ ನೀಡುವ ಚಿರಂತನ ಸ್ಫೂರ್ತಿಮಂತ್ರ ಇದು. ತಾಯಿ ಭಾರತಿಗೆ ವಿಪತ್ತು ಒದಗಿತೆಂದರೆ ಈ ಗೀತೆ ಆಕೆಯ ಮಕ್ಕಳಿಗೆ ನವಶಕ್ತಿ ನೀಡುತ್ತದೆ.

ಇದೇ ‘ವಂದೇ ಮಾತರಂ’ ಗೀತೆಯ ಅಂತರಾರ್ಥ. ಈ ರಣಮಂತ್ರ ಅನೇಕ ಭಾರತೀಯರಲ್ಲಿ ಇಂದಿಗೂ ಭಾರತೀಯತೆಯ ಶಕ್ತಿ ಪ್ರೇರಣೆ ನೀಡುತ್ತಿದೆ. ಭಾರತವನ್ನು ಮತ್ತೊಮ್ಮೆ ವಿಶ್ವ ಮಾತೆ ಜಗದ್ಗುರುವಿನ ಸ್ಥಾನಕ್ಕೇರಿಸಲು ಪ್ರೇರಣೆ ಶಕ್ತಿ ಸ್ಫೂರ್ತಿ ತುಂಬುತ್ತಿದೆ. ಬನ್ನಿ ಈ ಗೀತೆಯನ್ನು ನೀಡಿದ ಮಹಾನ್ ಚೇತನ ಬಂಕಿಮಚಂದ್ರರನ್ನು ಸ್ಮರಿಸೋಣ. ಅವರ ಜನ್ಮದಿನದಂದು ಮತ್ತೆ ವಂದೇಮಾತರಂ ಎಂಬ ರಣಮಂತ್ರವನ್ನು ಘೋಷಿಸುವ ಮೂಲಕ ಭಾರತಾಂಬೆಯನ್ನು ಮತ್ತೆ ವಿಶ್ವಮಾತೆ ಜಗದ್ಗುರುವನ್ನಾಗಿಸುವ ಸಂಕಲ್ಪವನ್ನು ಮಾಡೋಣ.

– **ಪ್ರೀತಿ**
ಅಂತಿಮ ಬಿ.ಎ

# ಜನಪ್ರಿಯ ಯಾತ್ರಾಸ್ಥಳ "ಕೂಡಲ ಸಂಗಮ"



ಇತಿಹಾಸ ಪ್ರಸಿದ್ಧವಾದ ಧಾರ್ಮಿಕ ಮತ್ತು ಪ್ರವಾಸಿ ತಾಣ, ಜಗಜ್ಯೋತಿ ಬಸವಣ್ಣನವರು ಐಕ್ಯವಾದ ಕ್ಷೇತ್ರ ಕೂಡಲಸಂಗಮ. ಸುಮಾರು 850 ವರ್ಷಗಳ ಪ್ರಾಚೀನವಾದ ಸಂಗಮೇಶ್ವರ ದೇವಾಲಯವಿದು. ಇದು ಮಲಪ್ರಭಾ ಮತ್ತು ಕೃಷ್ಣನದಿಯ ಸಂಗಮ ಸ್ಥಳ. ಕೂಡಲಸಂಗಮ ಬಾಗಲಕೋಟೆ ಜಿಲ್ಲೆಯ ಜನಪ್ರಿಯ ಯಾತ್ರಾಸ್ಥಳ. 12ನೇ ಶತಮಾನದಲ್ಲಿ ನಿರ್ಮಿಸಿದ ಈ ದೇವಾಲಯವು ನದಿಯ ದಂಡೆಯಲ್ಲಿದ್ದು ಹಲವು ಬಾರಿ ನವೀಕರಿಸಲಾಗಿದೆ.

ದ್ರಾವಿಡ ಶೈಲಿಯಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದ್ದು, ಪ್ರವೇಶದ್ವಾರದಲ್ಲಿ ದೊಡ್ಡ ಮಂದಿರದ ಗೋಪುರವಿದೆ. ಮುಖ್ಯ ದೇವಾಲಯುವು ಮುಖಮಂಟಪ. ನವರಂಗ ಮತ್ತು ಗರ್ಭಗುಡಿಯಿಂದ ಕೂಡಿದೆ. ಗರ್ಭಗೃಹದ ಬಾಗಿಲಿನ ಚೌಕಟ್ಟನ್ನು ಹೂವಿನ ವಿನ್ಯಾಸಗಳು ಮತ್ತು ಪ್ರಾಣಿಗಳ ಚಿತ್ರಗಳಿಂದ ಕೆತ್ತಲಾಗಿದೆ.

ಚಾಲುಕ್ಯ ಶೈಲಿಯಲ್ಲಿರುವ ಸಂಗಮನಾಥ ದೇವಾಲಯ, ಬಸವೇಶ್ವರನ ಐಕ್ಯ ಲಿಂಗ, ಬಸವ ಧರ್ಮ ಪೀಠದ ಮಹಾಮನೆ ಆವರಣ, ಪೂಜಾವನ ಹಾಗೂ ಬಸವ ಗೋಪುರ/ಬಸವ ಅಂತರಾಷ್ಟ್ರೀಯ ಕೇಂದ್ರ, ಸಭಾಭವನ. 6000 ಜನರಿಗೆ ಸ್ಥಳಾವಕಾಶ ಇರುವ ಈ ಸಭಾಂಗಣದ ನಾಲ್ಕು ದ್ವಾರಗಳಿಗೆ ಗಂಗಾಂಬಿಕೆ, ನೀಲಾಂಬಿಕೆ, ಚನ್ನಬಸವಣ್ಣ ಮತ್ತು ಅಕ್ಕನಾಗಮ್ಮ ಎಂದು ಹೆಸರಿಡಲಾಗಿದೆ.

**ವಸ್ತು ಸಂಗ್ರಹಾಲಯ**–ಬಸವಾದಿ ಶರಣರ ಕಾಲದ ಶಿಲ್ಪಿಗಳು ಮತ್ತು ಕರ್ನಾಟಕದ ಇತಿಹಾಸಕ್ಕೆ ಸಂಬಂಧಪಟ್ಟ ವಸ್ತುಗಳ ಸಂಗ್ರಹವಿದೆ.

ಕೃಷ್ಣ ಮತ್ತು ಮಲಪ್ರಭಾ ನದಿ ಸಂಗಮಿಸುವ ಕ್ಷೇತ್ರ ಬಸವಣ್ಣವನರ ಐಕ್ಯ ಸ್ಥಳವಾಗಿದ್ದು, ಲಿಂಗಾಯತ ಧರ್ಮದ ಪ್ರಮುಖ ಕ್ಷೇತ್ರವಾಗಿದೆ. ಬಸವಣ್ಣನವರು ಚಿಕ್ಕ ವಯಸ್ಸಿನಲ್ಲಿ ಇಲ್ಲಿಗೆ ಬಂದು ಈಶಾನ್ಯ ಗುರುಗಳಿಂದು ಖ್ಯಾತರಾಗಿರುವ ಪರಮಪೂಜ್ಯ ಜಾತವೇದ ಮುನಿಗಳಿಂದ ಶಿಕ್ಷಣ ಮತ್ತು ಮಾರ್ಗ ದರ್ಶನ ಪಡೆದರು. ಇಲ್ಲಿ ಕೃಷ್ಣ ನದಿ ಮತ್ತು ಮಲಪ್ರಭಾ ನದಿ ವಿಲೀನವಾಗಿ ಪೂರ್ವ ದಿಕ್ಕಿನಲ್ಲಿ ಆಂಧ್ರಪ್ರದೇಶ ರಾಜ್ಯದ ಶ್ರೀಶೈಲದ (ಇನ್ನೊಂದು ಕ್ಷೇತ್ರ) ಕಡೆಗೆ ಹರಿಯುತ್ತದೆ. ಕೂಡಲಸಂಗಮ ಕ್ಷೇತ್ರವು ಬಸವ ಸಾಗರ ಜಲಾಶಯದ ನಿರ್ಮಾಣದಿಂದಾಗಿ ಪ್ರಾಕೃತಿಕ ಚೆಲುವಿನಿಂದ ಶೋಭಿಸುತ್ತಿರುವ ಸುಂದರ ತಾಣ. ವಿಶ್ವಗುರು ಬಸವಣ್ಣನವರ ಪಾದ ಸ್ಪರ್ಶದಿಂದಾಗಿ 'ಮಹಾಮಹಿಮ ಸಂಗನ ಬಸವಣ್ಣನು ಪಾದವಿಟ್ಟ ಅವಿಮುಕ್ತ ಕ್ಷೇತ್ರ' ಎಂದು ಜಗನ್ಮಾತೆ ಅಕ್ಕಮಹಾದೇವಿ ಹೇಳಿದ್ದ ಪ್ರಕಾರ ಕೂಡಲ ಸಂಗಮವು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರವಾಗಿ ಇಂದು ಪುಣ್ಯಭೂಮಿಯಾಗಿ ಕಂಗೊಳಿಸುತ್ತಿದೆ.



**ಐಕ್ಯ ಮಂಟಪ**

ಬಸವಣ್ಣನವರ ಐಕ್ಯ ಮಂಟಪವು ನದಿಯ ತೀರದಲ್ಲಿ ತಗ್ಗಿನಲ್ಲಿದೆ. ಮಂಟಪದ ಒಳಗೆ ನದಿಯ ನೀರು ಹರಿದು ಹೋಗಬಾರದು ಎಂಬ ಉದ್ದೇಶದಿಂದ ಇಲ್ಲಿನ ಮಂಡಳಿ ಟೈಲ್ಸ್ ಅಳವಡಿಸಿದೆ. ಐಕ್ಯ ಮಂಟಪಕ್ಕೆ ಹೋಗಿ ಬರಲು ಸುಸಜ್ಜಿತ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಚಾಲುಕ್ಯ ಶೈಲಿಯ ನಾಲ್ಕು ಕಂಬಗಳ 15 ಅಡಿ ಎತ್ತರದ ಬಸವಣ್ಣನ ಐಕ್ಯ ಮಂಟಪ ಈಗ ಬಾಗಲಕೋಟೆ ಜಿಲ್ಲೆಯ ಲಾಂಛನವಾಗಿದೆ. ಐಕ್ಯ ಮಂಟಪದ ಮೇಲೆ ನಿಂತು ಹಿನ್ನೀರಿನ ಜಲಸಾಗರದ ನಡುವೆ ಸೂರ್ಯೋದಯ ಹಾಗೂ ಸೂರ್ಯ ಮುಳುಗುವ ದೃಶ್ಯ ಎಲ್ಲರ ಕಣ್ಣನ ಸೆಳೆಯುತ್ತದೆ.

**– ಮನೋಜ್‌ಕುಮಾರ್**
ಅಂತಿಮ ಬಿ.ಎ



# Departments of History, Economics, Geography, Sociology & IQAC

organised

## One-Day National Level Seminar - 6.3.2024

## ADVANCED RESEARCH METHODS AND APPROACHES



















# ಸಂಶೋಧನೆಗಳು ಸಮಾಜಕ್ಕೆ ಕೊಡುಗೆ ನೀಡಲಿ

## ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹೇಳಿಕೆ

**ವಿಕ ಸುದ್ದಿಲೋಕ** ಮೈಸೂರು

ಸಂಶೋಧನೆಗಳು ಸಮಾಜಕ್ಕೆ ಕೊಡುಗೆ ನೀಡುವಂತಿರಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹೇಳಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಶಿಕ್ಷಣ ಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಸಮಾಜಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಮುಂದುವರಿದ ಸಂಶೋಧನಾ ವಿಧಾನಗಳು ಮತ್ತು ಮಾರ್ಗಗಳು ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.



ನಗರದ ಮಹಾಜನ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಕಾರ್ಯಾಗಾರವನ್ನು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

"ಉನ್ನತ ಶಿಕ್ಷಣದಲ್ಲಿ ಸಂಶೋಧನೆ ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ಸತ್ಯ ಶೋಧನೆಗೆ ಹೆಚ್ಚು ಒತ್ತು ಕೊಡುವುದರ ಮೂಲಕ ಉತ್ತಮ ಸಮಾಜ ನಿರ್ಮಾಣ ಮಾಡಲು ಶ್ರಮಿಸಬೇಕು," ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಸಮಿತಿ ನಿರ್ದೇಶಕ ಪ್ರೊ.ಡಿ.ಆನಂದ್ ಮಾತನಾಡಿ, "ಸಂಶೋಧನೆಗಳು ಸಮಾಜದ ಒಳಿತಿಗೆ, ಅಭಿವೃದ್ಧಿಗೆ ಪೂರಕವಾಗಿರಬೇಕು," ಎಂದರು.

"ಸಂಶೋಧನೆಗಳು ಜ್ಞಾನದ ವಿಕಾಸ ಮತ್ತು ನವಪ್ರವರ್ತನೆಗಳಿಗೆ ಹೆಚ್ಚು ಒತ್ತು ಕೊಡುವಂತಿರಬೇಕು," ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, "ಇಂದಿನ ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಸಂಶೋಧನೆಗಳು ನೇರವಾಗಿ ಸಮಸ್ಯೆಗಳನ್ನು ಬಗೆಹರಿಸುವಂತಿರಬೇಕು," ಎಂದರು. ಇದೇ ವೇಳೆ ಅರ್ಥಶಾಸ್ತ್ರ ವಿಭಾಗದ ಕೌಟಿಲ್ಯ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು.

ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾರ್ಯ, ಮಹಾಜನ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಐಕ್ಯೂಎಸಿ ಸಂಚಾಲಕಿ ಡಿ.ಗೀತಾ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ. ಸೋಮಶೇಖರ್, ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ಎನ್.ವೆಂಕಟಲಕ್ಷ್ಮೀ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ದೀಪು, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಇದ್ದರು.



## Technical Sessions















**ಕನ್ನಡಪ್ರಭ**

# ಬಹು ಆಯಾಮದ ಸಂಶೋಧನೆ ಅತೀ ಅಗತ್ಯ

## ಇದರಿಂದ ಆರೋಗ್ಯಕರ ಸಮಾಜದ ನಿರ್ಮಾಣ ಸಾಧ್ಯ: ರಾಷ್ಟ್ರೀಯ ಕಾರ್ಯಾಗಾರದಲ್ಲಿ ಪ್ರೊ.ಎನ್.ಕೆ. ಲೋಕನಾಥ್

• **ಕನ್ನಡಪ್ರಭ ವಾರ್ತೆ** ಮೈಸೂರು

ಸಂಶೋಧನೆಗಳು ವಿವಿಧ ಆಯಾಮಗಳಲ್ಲಿ ಸತ್ಯ ಶೋಧನೆಗೆ ಹೆಚ್ಚು ಆದ್ಯತೆ ನೀಡುವ ಮೂಲಕ ಉತ್ತಮ ಸಮಾಜವನ್ನು ನಿರ್ಮಿಸಲು ಶ್ರಮಿಸುತ್ತವೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ತಿಳಿಸಿದರು.

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮದರ್ಜೆಕಾಲೇಜಿನಮಾನವಿಕವಿಭಾಗಗಳಾದ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಸಮಾಜ ಶಾಸ್ತ್ರ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಬುಧ ವಾರ ಆಯೋಜಿಸಿದ್ದ ಮುಂದುವರೆದ ಸಂಶೋಧನಾ ವಿಧಾನಗಳು ಮತ್ತು ಮಾರ್ಗಗಳು ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಉನ್ನತ ಶಿಕ್ಷಣದಲ್ಲಿ ಸಂಶೋಧನೆಯು ಪ್ರಮುಖ ವಾದ ಅಂಗವಾಗಿದ್ದು, ಅದು ವಿವಿಧ ಆಯಾಮಗಳಲ್ಲಿ ಸತ್ಯಶೋಧನೆಗೆ ಹೆಚ್ಚು ಒತ್ತುಕೊಡುವುದರ ಮೂಲಕ



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಾಗಾರವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟಿಸಿದರು. ಡಾ.ಡಿ. ಆನಂದ್, ಪ್ರೊ.ಪಿ.ಸರೋಜಮ್ಮ, ಪ್ರೊ.ಸಿ.ಕೆ. ರೇಣುಕಾರ್ಯ, ಡಾ.ಬಿ.ಆರ್. ಜಯಕುಮಾರಿ ಮೊದಲಾದವರು ಇದ್ದಾರೆ.

ಉತ್ತಮವಾದ ಸಮಾಜವನ್ನು ನಿರ್ಮಾಣ ಮಾಡಲು ಶ್ರಮಿಸಬೇಕು. ಜೊತೆಗೆ ನಾವು ಆಯ್ಕೆ ಮಾಡುವ ಸಂಶೋಧನಾ ವಿಷಯಗಳು ಸಮಾಜಕ್ಕೆ ಕೊಡುಗೆ ನೀಡುವಂತಿರಬೇಕು ಎಂದು ಅವರು ತಿಳಿಸಿದರು.

ಮುಖ್ಯ ಭಾಷಣಕಾರರಾಗಿದ್ದ ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ. ಆನಂದ್ ಮಾತನಾಡಿ, ಇಂದಿನ ತಾಂತ್ರಿಕ ಯುಗ ದಲ್ಲಿ ಯುವ ಸಂಶೋಧಕರಲ್ಲಿ ವೈಜ್ಞಾನಿಕ ಆಲೋ ಚನೆ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಮಾನವಿಕ ವಿಷಯ ಗಳಾದ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ ಹಾಗೂ ಸಮಾಜಶಾಸ್ತ್ರದಂತಹ ಬಹು ಆಯಾಮದ ಸಾಮಾಜಿಕ ವಿಜ್ಞಾನದ ಸಂಶೋಧನಾ ಚರ್ಚೆಗಳು ಮುಖ್ಯ ಎಂದರು.

ಇವುಗಳಿಂದ ಮಾನವೀಯತೆಯ ಮೌಲ್ಯಗಳು, ತತ್ವಗಳು ಮತ್ತು ಸಿದ್ಧಾಂತ ಸಂಶೋಧನಾರ್ಥಿಗಳು ಅಳವಡಿಸಿಕೊಂಡು ಸಮಾಜದಲ್ಲಿರುವ ಬಡತನ, ಸಾಮಾಜಿಕ ಅನ್ಯಾಯ ಸರಿಪಡಿಸುವಲ್ಲಿ ಸಂಖ್ಯಾಶಾಸ್ತ್ರ ಮತ್ತು ಗಣಿತಶಾಸ್ತ್ರದ ಅಂಕಿ-ಅಂಶಗಳ ಮೂಲಕ ಸಮಸ್ಯೆಗಳನ್ನು ದಾಖಲೆಗಳ ಮೂಲಕ ತಿಳಿಯಪಡಿಸುತ್ತಾ, ಸಮಾಜದ ಒಳಿತಿಗೆ ಸದಾ ಶ್ರಮಿಸಲು ಮುಂದಾಗಬೇಕು. ಇದಕ್ಕೆ ಸಂಶೋಧನೆಗಳು ಜ್ಞಾನ ದ ವಿಕಾಸ ಮತ್ತು ನವಪ್ರವರ್ತನೆಗಳಿಗೆ ಹೆಚ್ಚು ಒತ್ತು ಕೊಡುವಂತಿರಬೇಕು ಎಂದು ಅವರು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಇಂದಿನ ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಸಂಶೋಧನೆಗಳು ನೇರವಾಗಿ ಸಮಸ್ಯೆಗಳನ್ನು ಬಗೆಹರಿಸುವಂತಿರಬೇಕು ಎಂದರು.

ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಸಿ.ಕೆ. ರೇಣುಕಾರ್ಯ, ಮಹಾಜನ ವಿದ್ಯಾ ಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಐಕ್ಯೂಎಸಿ ಸಂಚಾಲಕಿ ಡಿ. ಗೀತಾ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ. ಸೋಮಶೇಖರ್ ಇದ್ದರು. ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ ಸ್ವಾಗತಿಸಿದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ಎನ್. ವೆಂಕಟಲಕ್ಷ್ಮಿ ಕಾರ್ಯಾಗಾರದ ಕುರಿತು ಪರಿಚಯಿಸಿದರು. ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ದೀಪು ವಂದಿಸಿದರು. ಡಾ.ಎಂ.ಆರ್. ಇಂದ್ರಾಣಿ ನಿರೂಪಿಸಿದರು.

MYSORE CITY Edition
Mar 7, 2024 Page No. 02
Powered by : eRelego.com



ಇತಿಹಾಸ ವಿಭಾಗ, ಎಂಟ್ರಿ ಟು ಸರ್ವಿಸ್, ಐಕ್ಯೂಎಸಿ ಮತ್ತು ಅಕ್ಕ ಐಎಎಸ್ ಅಕಾಡೆಮಿ, ಮೈಸೂರು.

ಇವರ ಸಹಯೋಗದಲ್ಲಿ ಒಂದು ದಿನದ ಕಾರ್ಯಾಗಾರ – 23.2.2024

# ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳು ಮತ್ತು ಅವಕಾಶಗಳು










ಮೈಸೂರು ಮಿತ್ರ ಶನಿವಾರ 24 ಫೆಬ್ರವರಿ 2024

## ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಕಾರ್ಯಾಗಾರ

**ವ್ಯಾಸಂಗ ವೇಳೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವುದು ಉತ್ತಮ**

- ಅಕ್ಕ ಐಎಎಸ್ ಅಕಾಡೆಮಿ ಸಂಸ್ಥಾಪಕ ಡಾ। ಶಿವಕುಮಾರ್ ಅಭಿಮತ
- ಓದುವ ಅವಕಾಶ ಸಮಯ ವ್ಯರ್ಥ ಮಾಡಿಕೊಳ್ಳದಂತೆ ಕಿವಿಮಾತು

ಮೈಸೂರು.ಫೆ.23(ಎಂಟಿವೈ)– ಪದವಿ ಶಿಕ್ಷಣ ಪಡೆಯುವ ಹಂತದಲ್ಲಿಯೇ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಲಾರಂಭಿಸಿದರೆ, ಸುಲಭವಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಗಳಿಸಬಹುದು ಎಂದು ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಡಾ. ಶಿವಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಇತಿಹಾಸ ವಿಭಾಗ, ಎಂಟ್ರಿಟು ಸರ್ವೀಸ್, ಐಕ್ಯೂಎಸಿ ಹಾಗೂ ಅಕ್ಕ ಐಎಎಸ್ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ 'ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳು ಮತ್ತು ಅವಕಾಶಗಳು' ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕೆಂದು ಉದ್ದೇಶಿಸಿರುವ ವಿದ್ಯಾರ್ಥಿಗಳು ಪೂರ್ವ ತಯಾರಿಯೊಂದಿಗೆ ನಿರ್ದಿಷ್ಟ ಮನೋ ಭಾವ, ದೃಢಸಂಕಲ್ಪ, ಸಮಯ ಪ್ರಜ್ಞೆ ಹಾಗೂ ಕಠಿಣ ಪರಿಶ್ರಮ ಪಡಬೇಕು. ಪದವಿ ಕಾಲೇಜುಗಳಲ್ಲಿ ಶಿಕ್ಷಣ ಪಡೆದು ಪರೀಕ್ಷೆ ಬರೆಯುವುದಕ್ಕೂ, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಶುಕ್ರವಾರ ಆಯೋಜಿಸಿದ್ದ 'ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳು ಮತ್ತು ಅವಕಾಶಗಳು' ಕುರಿತ ಒಂದು ದಿನದ ಕಾರ್ಯಾಗಾರವನ್ನು ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಡಾ.ಶಿವಕುಮಾರ್ ಉದ್ಘಾಟಿಸಿದರು.

ಕಾಲೇಜಿನಲ್ಲಿ ಪರೀಕ್ಷೆ ಬರೆದು, ಉತ್ತೀರ್ಣರಾಗಿ ಅಂಕಪಟ್ಟಿ ಪಡೆದುಕೊಳ್ಳಬಹುದು. ಆದರೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಂಕಪಟ್ಟಿ ಸಿಗುವುದಿಲ್ಲ. ಉತ್ತೀರ್ಣರಾದರೆ ಸರ್ಕಾರಿ ಉದ್ಯೋಗ ಸಿಗುತ್ತದೆ. ಅನುತ್ತೀರ್ಣರಾದರೆ ಮತ್ತೊಮ್ಮೆ ಪರೀಕ್ಷೆ ಬರೆಯಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಸ್ಪಷ್ಟತೆ ಇರಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಪದವಿ ಶಿಕ್ಷಣ ಪಡೆಯುತ್ತಿರುವಾಗಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಬೇಕು. ದಿನದ 24 ಗಂಟೆಗಳಲ್ಲಿ ಕನಿಷ್ಠ 3 ಗಂಟೆಗಳಾದರೂ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಅಭ್ಯಾಸ ಮಾಡಬೇಕು. ಅದಕಾಗಿ ದಿನಚರಿ ರೂಪಿಸಿಕೊಂಡು ಅಧ್ಯಯನ ಮಾಡಬೇಕು. ವಿದ್ಯಾರ್ಥಿದೆಸೆಯಲ್ಲಿದ್ದಾಗ ಮಾತ್ರ ಓದಲು ಸಾಧ್ಯ. 15 ರಿಂದ 25 ವರ್ಷದವರೆಗೆ ಓದುವ ಆಸಕ್ತಿ ಕ್ಷಿಪ್ರವಾಗಿರುತ್ತದೆ. ಆ ವಯಸ್ಸಿನಲ್ಲಿ ನಾವು ಶ್ರಮವಹಿಸಿದ್ದಲ್ಲಿ ಮಾತ್ರ ಮುಂದಿನ 50–60 ವರ್ಷಗಳು ನೆಮ್ಮದಿಯ ಜೀವನವನ್ನು ಸಾಗಿಸಬಹುದು. ಆದ್ದರಿಂದ ಓದುವ ಅವಕಾಶ ಮತ್ತು ಸಮಯ ಎರಡನ್ನು ವ್ಯರ್ಥ ಮಾಡಬಾರದು. ನಮಗಿರುವ ಸಾಮರ್ಥ್ಯದ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು. ನಮ್ಮ ಸಾಮರ್ಥ್ಯದ ಬಗ್ಗೆ ನಮಗೆ ಸಂಪೂರ್ಣ ನಂಬಿಕೆ ಇರಬೇಕು. ಆಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್.ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥರೂ ಆದ ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಐಕ್ಯೂಎಸಿ ಸಂಚಾಲಕರಾದ ಗೀತಾ ಡಿ, ಸಂಪನ್ಮೂಲ ವ್ಯಕ್ತಿಗಳಾದ ಮುನಿರಾಜು ಎಂ., ಕನ್ನಡ ವಿಭಾಗದ ಮುಖ್ಯಸ್ಥ ಡಾ. ಹೆಚ್.ಆರ್.ತಿಮ್ಮೇಗೌಡ, ಇತಿಹಾಸ ಸಹಾಯಕ ಪ್ರಾಧ್ಯಾಪಕರಾದ ನಂದೀಶ ಎ.ಆರ್ ಹಾಗೂ ಇನಿತರರು ಪಾಲ್ಗೊಂಡಿದರು.



Special Lecture: Importance of Cultural Heritage - 28.3.2024

Resource Person: **Dr. Sreedhara H**

Venue: Vanivilasa Ursu Womens First Grade College, Mysuru












# Archaeo Anthropological Exhibition at Regional Institute of Education Mysuru - 12th & 13th March 2024















ಮೈಸೂರು ವಿವಿ ಎಂ.ಎ. ಇತಿಹಾಸ ವಿಷಯದಲ್ಲಿ ಅತಿ ಹೆಚ್ಚು ಅಂಕಗಳೊಂದಿಗೆ 5 ಚಿನ್ನದ ಪದಕಗಳನ್ನು ಪಡೆದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಹಿರಿಯ ವಿದ್ಯಾರ್ಥಿ ಶಾಬಜ್ ಖಾನ್ ಅವರನ್ನು ನಿವೃತ್ತ ಐಪಿಎಸ್ ಅಧಿಕಾರಿ ಡಾ. ಶಂಕರ್‌ಬಿದರಿ ಅಭಿನಂದಿಸಿದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಇದ್ದಾರೆ.









ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 43 ಮೇ 2024 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajana.edu.in | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 08

## ಸಂಪಾದಕೀಯ

### ಮೈಸೂರು ಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ (1919–1974)



ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಮತ್ತು ಯುವರಾಣಿ ಚೆಲುವರಾಜಮ್ಮಣ್ಣಿ ಅವರ ಪುತ್ರರಾಗಿ 18 ಜುಲೈ 1919ರಲ್ಲಿ ಜಯಚಾಮರಾಜ ಒಡೆಯರ್ ಜನ್ಮ ತಾಳಿದರು. ಮೈಸೂರನ್ನಾಳಿದ ಯದುವಂಶೀಯರಲ್ಲಿ ಇವರು ಇಪ್ಪತ್ತೈದನೇಯ ಹಾಗೂ ಕೊನೆಯ ಅರಸರು.

ರಾಘವೇಂದ್ರರಾಯ, ಸೋಸಲೆ ಅಯ್ಯಾಶಾಸ್ತ್ರಿ, ಡಿ. ಸುಬ್ಬರಾಯ ವೆಂಕಟಸ್ವಾಮಿ ಐಯ್ಯರ್, ಫ್ರೇಜರ್, ಜೆ. ಕುಕ್ ಮುಂತಾದ ವಿದ್ವಾಂಸರಲ್ಲಿ ಜಯಚಾಮರಾಜರ ವಿದ್ಯಾಭ್ಯಾಸ ಮುಂದುವರಿಯಿತು.

ಕನ್ನಡ, ಸಂಸ್ಕೃತ, ಇಂಗ್ಲೀಷ್, ಉರ್ದು, ವಿಜ್ಞಾನ, ರಾಜ್ಯಶಾಸ್ತ್ರ, ಕಾನೂನು, ಸಂಗೀತ, ಕಲೆ, ದೈಹಿಕ ಶಿಕ್ಷಣ, ಕುದುರೆ ಸವಾರಿ, ಕ್ರಿಕೆಟ್‌ಗಳಲ್ಲೂ ಜಯಚಾಮರಾಜ ಒಡೆಯರ್ ಅವರು ಪರಿಣತಿ ಪಡೆದವರಾಗಿದ್ದರು. ಇವೆಲ್ಲ ಮಾದರಿ ಮೈಸೂರು ಸಂಸ್ಥಾನದ ಅರಸರಿಗೆ ಉಚಿತವಾಗಿಯೇ ಇತ್ತು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಆಗಿದ್ದರಿಂದ, ಐದು ಬಂಗಾರದ ಪದಕಗಳು ಒಡೆಯರಿಗೆ ಪ್ರಾಪ್ತವಾದವು. ಕಾಲೇಜಿನಲ್ಲಿ ಉತ್ತಮ ವಾಗ್ಮಿ ಎಂಬ ಖ್ಯಾತಿಗೆ ಒಳಗಾಗಿದ್ದರು.

ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ವಿದೇಶ ಪ್ರವಾಸ ಹೊರಟ ಜಯಚಾಮರಾಜೇಂದ್ರ ಒಡೆಯರ್ ಜಪಾನ್‌ಗೆ ತೆರಳಿ ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಂಡರು. 1938ರಲ್ಲಿ ರಾಜಕುಮಾರಿ 'ಸತ್ಯಪ್ರೇಮ ಕುಮಾರಿದೇವಿ' ಯೊಡನೆ ಜಯಚಾಮರಾಜ ಒಡೆಯರ್ ಅವರ ವಿವಾಹ ಜರುಗಿತು. ಅನಂತರ ಕಾಶಿ ಹಿಂದೂ ವಿಶ್ವವಿದ್ಯಾನಿಲಯ ದಲ್ಲಿ ವ್ಯಾಸಾಂಗ ಮುಂದುವರಿಸಿ ಎಲ್.ಎಲ್.ಡಿ. ಪ್ರಶಸ್ತಿಗಳಿಸಿದರು. ಸಂಗೀತದಲ್ಲಿ ಲಂಡನ್ನಿನ ಹೆಸರಾಂತ ಸಂಸ್ಥೆ ಗಿಲ್ಡ್ ಹಾಲ್ ಸ್ಕೂಲ್ ಆಫ್ ಮ್ಯೂಸಿಕ್‌ನಿಂದ "ಲೈಸನ್ಷಿಯೇಟ್" ಪದವಿ ಒಡೆಯರಿಗೆ ಲಭಿಸಿತು.

ಕೃಷ್ಣರಾಜ ಒಡೆಯರ ಕೈಯಲ್ಲಿ ನುರಿತಿದ್ದ ಜಯಚಾಮರಾಜ ಒಡೆಯರಿಗೆ ಆಗಲೇ ಆಡಳಿತದ ರೀತಿ ನೀತಿಗಳ ಸೂಕ್ಷ್ಮ ಪರಿಚಯವೂ ಇದ್ದಿತು. ಮಿರ್ಜಾ ಇಸ್ಮಾಯಿಲ್ ಸ್ಥಾನಕ್ಕೆ ದಿವಾನರಾಗಿ ಬಂದ 'ನ್ಯಾಪತಿ ಮಾಧವರಾಯರು' ಬಹು ಮೇಧಾವಿ ಹಾಗೂ ಪ್ರಾಮಾಣಿಕತೆಗೆ ಹೆಸರಾಗಿದ್ದರು. ಶ್ರೀಸಾಮಾನ್ಯರ ಕಷ್ಟ ಕಾರ್ಪಣ್ಯಗಳನ್ನು ಬಗೆಹರಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು. ಅನಂತರ 1946ರಲ್ಲಿ ದಿವಾನರಾದ ಸರ್. ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಉನ್ನತ ರಾಜನೀತಿಜ್ಞರಾಗಿದ್ದರು.

ಈ ಹೊತ್ತಿಗಾಗಲೇ ಭಾರತ ಸ್ವಾತಂತ್ರ್ಯ ಸಾಧನೆಯತ್ತ ತೀವ್ರವಾಗಿ ಮುನ್ನಡೆದಿತ್ತು. ಸತ್ಯಾಗ್ರಹ ಮುಂತಾದ ಚಳುವಳಿಗಳಿಂದ ದೇಶ ತತ್ತರಿಸಿ ಹೋಗಿದ್ದಿತು. ದೇಶದಲ್ಲಿ ಸ್ವಾತಂತ್ರ್ಯ ಹೋರಾಟ ನಡೆದಿದ್ದು, ಪ್ರಜಾಪ್ರಭುತ್ವ ಅನುಷ್ಠಾನದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರಯತ್ನ ನಡೆಸಿತು. ಬದಲಾಗುತ್ತಿರುವ ಪರಿಸ್ಥಿತಿಯ ಪ್ರಜ್ಞೆ ಹೊಂದಿದ್ದರು. ತಮ್ಮ ಸಂಸ್ಥಾನಗಳನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಲು ಸ್ವಯಂಪ್ರೇರಣೆಯಿಂದ ಮುಂದೆ ಬಂದ ಭಾರತೀಯ ಅರಸರಲ್ಲಿ 'ಜಯಚಾಮರಾಜೇಂದ್ರ ಒಡೆಯರ್' ಮೊದಲಿಗರು. ಇದು ಒಡೆಯರಿಗೆ ಇಡೀ ದೇಶದ ಮನ್ನಣೆ ಹಾಗೂ ಗೌರವವನ್ನು ತಂದುಕೊಟ್ಟಿತು.

**ಪು.ತಿ.ನೋ.**

ಸೆಪ್ಟೆಂಬರ್ 7 ರ 1947 ರಂದು ಜಯಚಾಮರಾಜೇಂದ್ರ ಒಡೆಯರು 'ಪ್ರಜಾಪ್ರತಿನಿಧಿ ಸಭೆ'ಯಲ್ಲಿ ಜವಾಬ್ದಾರಿ ಸರ್ಕಾರ ರಚನೆಯಾಯಿತು. ಅಂದಿನ ಕಾಂಗ್ರೆಸ್ ಅಧ್ಯಕ್ಷರಾದ ಕೆ. ಚಂಗಲರಾಯ್‌ರೆಡ್ಡಿ ರಾಜ್ಯದ ಪ್ರಥಮ ಮುಖ್ಯಮಂತ್ರಿ ಆದರು. ಮೈಸೂರಿನ ಮಹಾರಾಜರು 1947ರ ನವೆಂಬರ್‌ನಲ್ಲಿ ಭಾರತದ ಒಕ್ಕೂಟಕ್ಕೆ ಮೈಸೂರು ಸಂಸ್ಥಾನವನ್ನು ವಿಲೀನಗೂಳಿಸುವವರೆಗೂ ಮಹಾರಾಜರಾಗಿ ಮುಂದುವರೆದರು. ಆ ಸಮಯದಲ್ಲಿ ರಾಷ್ಟ್ರಕವಿ ಕುವೆಂಪು ಈ ಕೆಳಗಿನಂತೆ ಹೇಳಿದರು.

"ಎಲ್ಲರೂ ಸಿಂಹಾಸನಾಧೀಶರಾಗಿ ಮಹಾರಾಜರಾದರೆ ಜಯಚಾಮರಾಜೇಂದ್ರ ಒಡೆಯರ್ ಅದನ್ನು ತ್ಯಜಿಸಿಯೇ ಮಹಾರಾಜರಾದರು."

1956ರಲ್ಲಿ ಮಹಾರಾಜ ಪದವಿರದ್ದಾದ ಮೇಲೆ ಜಯಚಾಮ ರಾಜೇಂದ್ರ ಒಡೆಯರ್ ಮೈಸೂರಿನ ರಾಜಪ್ರಮುಖರಾಗಿ ನೇಮಕಗೊಂಡರು. ಅನಂತರ ಮದ್ರಾಸಿನ ಅಧಿಕಾರ ನಿರ್ವಹಿಸಿದರು. ಆಸ್ಟ್ರೇಲಿಯಾದ ಕ್ವೀನ್ಸ್ ಲ್ಯಾಂಡ್ ವಿಶ್ವವಿದ್ಯಾನಿಲಯ ಒಡೆಯರರಿಗೆ 1963ರಲ್ಲಿ ಡಿ.ಲಿಟ್. ಪದವಿ ನೀಡಿ ಗೌರವಿಸಿತು. ಧರ್ಮಶ್ರದ್ಧೆ, ಸಾಹಿತ್ಯಾಭಿರುಚಿ, ಕಲೆ, ಸಂಗೀತ, ತತ್ವ ವಿಚಾರಗಳಲ್ಲಿ ಅಪಾರ ಒಲವಿದ್ದ ಒಡೆಯರ್ ಅವರು ಪಾಶ್ಚಾತ್ಯ ದೇಶಗಳಲ್ಲಿ ಆ ಬಗ್ಗೆ ವಿದ್ವತ್ಪೂರ್ಣ ಉಪನ್ಯಾಸಗಳನ್ನೂ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಉದಾರಿಯಾದ ಒಡೆಯರ್ ಅವರು ನೀಡಿದ ಧನ ಸಹಾಯದ ಉಪಯೋಗ ಪಡೆದ ಸಂಘ, ಸಂಸ್ಥೆಗಳು ನೂರಾರು. ಕನ್ನಡ ನಾಡು ನುಡಿಯ ಅಭಿಮಾನಿಯಾಗಿದ್ದು, ಕರ್ನಾಟಕದ ಏಕೀಕರಣದ ಬಗ್ಗೆ ಆಸೆ ತಳೆದಿದ್ದರು. ಒಡೆಯರು 1973 ನವೆಂಬರ್ 1 ರಂದು ಮೈಸೂರು ರಾಜ್ಯಕ್ಕೆ 'ಕರ್ನಾಟಕ ರಾಜ್ಯ' ಎಂದು ನಾಮಕರಣವಾದಾಗ, ಹಂಪಿಯಲ್ಲಿ ಜರುಗಿದ ಸಮಾರಂಭದ ಮುಖ್ಯ ಅತಿಥಿಯಾಗಿದ್ದು, ಅಲ್ಲಿಯೇ ಸಂತಸದಿಂದ ಜ್ಯೋತಿ ಬೆಳಗಿಸಿದ್ದು, ಮೈಸೂರು ಒಡೆಯರ ಕಾಲದ ಸಾಂಸ್ಕೃತಿಕ ಬೆಳವಣಿಗೆಗೆ ನಾಂದಿಯಾಯಿತು.

"Dattatreya the way and the Goal" ಒಡೆಯರ್ ಬರೆದ ಅತ್ಯುತ್ತಮ ಕೃತಿ. ಲಂಡನ್ನಿನಲ್ಲಿ ಪ್ರಕಟವಾದ ಈ ಗ್ರಂಥದ ಮುನ್ನುಡಿಯಲ್ಲಿ ಡಾ.ಎಸ್. ರಾಧಾಕೃಷ್ಣನ್‌ರವರು ಒಡೆಯರ್ ಅವರ ವಿಸ್ತಾರವಾದ ಜ್ಞಾನಸಂಪತ್ತನ್ನು, ಆಳವಾದ ಧರ್ಮನಿಷ್ಠೆಯನ್ನು ಪ್ರಶಂಸಿದ್ದಾರೆ. "Geetha and Indian Culture" 'ಧರ್ಮ ಮತ್ತು ಮಾನವ' ಒಡೆಯರ್ ಬರೆದ ಇನ್ನೆರಡು ಕೃತಿಗಳು. ಒಡೆಯರ್ ಪ್ರೋತ್ಸಾಹದಿಂದ ಪ್ರಕಟಿಸಿದ ಕೃತಿಗಳ ಸಂಖ್ಯೆ 300ಕ್ಕೂ ಹೆಚ್ಚು. ಹಾಗೆಯೇ "ಶ್ರೀ ಮಹಾಗಣಪತಿಂ ಭಜೇಹಂ" "ಚಿಂತಯಾಮಿ ಜಗದಂಬಾ" "ಸರಸ್ವತೀಂ ಭಗವತೀಂ ನಮಾಮ್ಯಹಂ" "ಶಿವ ಶಿವ ಶಂಭೋ ಮಹದೇವ ಶಂಭೋ" ಮುಂತಾದ ಕೀರ್ತನೆಗಳನ್ನು ಒಡೆಯರು ಹೊಸ ಹೊಸ ರಾಗಗಳಲ್ಲಿ ರಚಿಸಿದ್ದಾರೆ. ಇದು ಸಂಗೀತದಲ್ಲಿದ್ದ ಅವರ ಜ್ಞಾನಸಂಪತ್ತಿಗೆ ಸಾಕ್ಷಿಯಾಗಿದೆ.

ವಿದ್ಯಾಪಕ್ಷಪಾತಿಯಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಮೈಸೂರಿನಲ್ಲಿ ತಮ್ಮ ಅನೇಕ ಬಂಗಲೆಗಳನ್ನು ಶಿಕ್ಷಣ ಸಂಸ್ಥೆಗಳಿಗಾಗಿ ಬಿಟ್ಟುಕೊಟ್ಟರು. ಅವುಗಳಲ್ಲಿ ಮುಖ್ಯವಾದವು. ಕೇಂದ್ರ ಆಹಾರ ಸಂಶೋಧನಾಲಯ (CFTRI), ಮೈಸೂರು ವಿಶ್ವವಿದ್ಯಾನಿಲಯ ಸಂಸ್ಥೆಗಳು, ಇತ್ಯಾದಿ. ಇವಲ್ಲದೆ G.C.S.I. ಮತ್ತು G.C.B. ಎಂಬ ಬಿರುದುಗಳನ್ನು ಸಹ ಇವರಿಗೆ ನೀಡಲಾಗಿತ್ತು.

ಜಯಚಾಮರಾಜೇಂದ್ರ ಒಡೆಯರ್ 1974 ಸೆಪ್ಟೆಂಬರ್ 23ರಂದು ನಿಧನ ಹೊಂದಿದರು. ಕರ್ನಾಟಕದ ಕೊನೆಯ ಅರಸೊತ್ತಿಗೆಯ ಅಧ್ಯಾಯ ಮುಕ್ತಾಯವಾಯಿತು. ಸದ್ಯ ನಾವು ನೀವುಗಳೆಲ್ಲಾ ಪ್ರಜಾಪ್ರಭುತ್ವದ ಆಡಳಿತದಲ್ಲಿದ್ದೇವೆ ಎಂಬುದು ಅಷ್ಟೇ ಖುಷಿಯ ಸಂಗತಿ. ಇದಕ್ಕೆ ಮುಖ್ಯ ಕೊಡುಗೆ ಜಯಚಾಮರಾಜೇಂದ್ರ ಒಡೆಯರ್ ರವರು ಇಡೀ ಭಾರತದ ಸಂಸ್ಥಾನಗಳಲ್ಲಿ ಭಾರತ ಒಕ್ಕೂಟ ಸೇರಿದ ಮೊದಲ ಸಂಸ್ಥಾನ ಮೈಸೂರು ಸಂಸ್ಥಾನವಾಗಿದೆ.

**– ಡಾ. ಶ್ರೀಧರ ಹೆಚ್**
ಶೈಕ್ಷಣಿಕ ಡೀನ್
ಹಾಗೂ
ಮುಖ್ಯಸ್ಥರು, ಇತಿಹಾಸ ವಿಭಾಗ

## ಪ್ರಚಲಿತ ವಿದ್ಯಮಾನ

## ರಾಮಚರಿತ ಮಾನಸ, ಪಂಚತಂತ್ರ ಕೃತಿಗಳು ಯುನೆಸ್ಕೋ ಪಟ್ಟಿಗೆ ಸೇರ್ಪಡೆ




ತುಳಸಿದಾಸರ ರಾಮಚರಿತಮಾನಸದ ಪುರಾತನ ಸಚಿತ್ರ ಹಸ್ತಪ್ರತಿಗಳು ಮತ್ತು ಪಂಚತಂತ್ರ ನೀತಿಕಥೆಗಳ 15ನೇ ಶತಮಾನದ ಹಸ್ತಪ್ರತಿಗಳು ಏಷ್ಯಾ–ಫೆಸಿಫಿಕ್ 20 ಅಂಶಗಳಲ್ಲಿ ಸೇರಿಸಲಾಗಿದೆ. ಇವುಗಳನ್ನು 2024ರ ಯುನೆಸ್ಕೋದ ವಿಶ್ವ ಪ್ರಾದೇಶಿಕ ನೊಂದಣಿಯ ಸ್ಮರಣಿಕೆಯಲ್ಲಿ ಸೇರಿಸಲಾಗಿದೆ ಎಂದು ಸೋಮವಾರ ಘೋಷಿಸಲಾಗಿದೆ.

ಮಂಗೋಲಿಯಾದ ಉಲಾನ್‌ಬಾತರ್‌ನಲ್ಲಿ ಮೇ 7–8 ರಂದು ಅಯೋಜಿಸಲಾಗಿದ್ದ ಏಷ್ಯಾ ಮತ್ತು ಫೆಸಿಫಿಕ್ ವಿಶ್ವ ಸಮಿತಿಯ 10ನೇ ಸಾಮಾನ್ಯ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

❖❖❖❖❖



# ಪ್ರಾಚೀನ ಭಾರತದ ವಿದ್ಯಾಕಾಶಿ ನಳಂದ ವಿಶ್ವವಿದ್ಯಾಲಯ



ನಳಂದ ವಿಶ್ವವಿದ್ಯಾಲಯ ಒಂದು ಸಾರ್ವಜನಿಕ ಕೇಂದ್ರೀಯ ವಿಶ್ವವಿದ್ಯಾಲಯವಾಗಿದ್ದು, ಇದು ಬಿಹಾರ ರಾಜ್ಯದ ನಳಂದ ಜಿಲ್ಲೆಯ ರಾಜ್‌ಗಿರ್ ಎಂಬಲ್ಲಿ ಸ್ಥಾಪಿತಗೊಂಡಿದೆ. ಇದು ಇಂದಿಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯಾದ ವಿಶ್ವವಿದ್ಯಾಲಯ ಎಂದು ಹೆಸರು ಮಾಡಿದೆ. ಈ ಅಂತರಾಷ್ಟ್ರೀಯ ವಿಶ್ವವಿದ್ಯಾಲಯ ಸುಮಾರು 18 ರಾಷ್ಟ್ರಗಳಿಂದ ಮಾನ್ಯತೆಯನ್ನು ಪಡೆದಿದ್ದು, ಉತ್ಕೃಷ್ಟ ಶಿಕ್ಷಣಕ್ಕೆ ವಿಶ್ವ ಮಾನ್ಯತೆಯನ್ನು ಗಳಿಸಿದೆ. ಇಲ್ಲಿ ಎರಡು ಮತ್ತು ನಾಲ್ಕನೆಯ ಪೂರ್ವ ಏಷ್ಯಾ ರಾಷ್ಟ್ರಗಳ ಸಮ್ಮೇಳನಗಳು ನಡೆದ ಹೆಗ್ಗಳಿಕೆಗಳೂ ಈ ವಿಶ್ವವಿದ್ಯಾಲಯಕ್ಕೆ ಇವೆ. ಈ ಪ್ರಸಿದ್ಧ ವಿಶ್ವವಿದ್ಯಾಲಯಕ್ಕೆ ಘನತೆವೆತ್ತ ಭಾರತದ ರಾಷ್ಟ್ರಪತಿಗಳು ಸಂದರ್ಶಕರಾಗಿರುತ್ತಾರೆ!

ಇದು ಭಾರತದ ಪ್ರಾಚೀನ ವಿಶ್ವವಿದ್ಯಾಲಯಗಳಲ್ಲಿಯೂ ಒಂದು. ಇದನ್ನು 'ನಳಂದ ಮಹಾವಿಹಾರ' ಎಂದೂ ಕರೆಯಲಾಗುತ್ತದೆ. ಇದು 5 ರಿಂದ 13ನೇ ಶತಮಾನದವರೆಗೂ ಕಾರ್ಯನಿರ್ವಹಿಸಿದ ದಾಖಲೆಗಳಿವೆ. ಈ ನಳಂದ ವಿಶ್ವವಿದ್ಯಾಲಯವನ್ನು 2007 ರಲ್ಲಿ ಪುನರುಜ್ಜೀವನಗೊಳಿಸಲಾಯ್ತು.

## ಅಂತರಾಷ್ಟ್ರಿಯ ಮಟ್ಟದ ಮಾನ್ಯತೆ

ಈ ನಳಂದ ವಿಶ್ವವಿದ್ಯಾಲಯ ಇಂದು ಅಂತರಾಷ್ಟ್ರೀಯ ಮಟ್ಟದ ಮಾನ್ಯತೆಯನ್ನು ಗಳಿಸಿದೆ. ಇದರ ಶೈಕ್ಷಣಿಕ ಕಾರ್ಯಕ್ರಮಗಳು ಸೆಪ್ಟೆಂಬರ್ 1, 2014ರಿಂದ ಪುನರಾರಂಭಗೊಂಡಿವೆ. ಈ ವಿಶ್ವವಿದ್ಯಾಲಯವನ್ನು ಈಗ 400 ಎಕರೆ ವಿಸ್ತಾರವಾದ ಪ್ರದೇಶದಲ್ಲಿ ಪುನರ್ ನಿರ್ಮಾಣ ಮಾಡಲಾಗಿದೆ. ಅಂತು ಇದನ್ನು ಪ್ರಾಚೀನ ನಳಂದ ವಿಶ್ವವಿದ್ಯಾಲಯ ಸ್ಮರಣೆಯಲ್ಲಿ ನಿರ್ಮಿಸಿರುವುದು ನಿಜಕ್ಕೂ ಔಚಿತ್ಯಪೂರ್ಣ.

ಈ ಪುರಾತನ ವಿಶ್ವವಿದ್ಯಾಲಯವನ್ನು ಪ್ರಖ್ಯಾತ ಬುದ್ಧ ಸಿದ್ಧಾಂತಿ ಮಹಾವಿಹಾರನ ಹೆಸರಿನಲ್ಲಿ ಮಗಧ (ಇಂದಿನ ಬಿಹಾರ) ರಾಜ್ಯದಲ್ಲಿ ಸ್ಥಾಪಿಸಲಾಯ್ತು. ಇದನ್ನು ಅಂದಿನ ಖ್ಯಾತ ನಗರ ರಾಜಗಿರಿಯಲ್ಲಿ ಆರಂಭಿಸಲಾಯ್ತು. ಇಲ್ಲಿಂದ 90 ಕಿ.ಮೀ. ದೂರದಲ್ಲಿ ಅಂದಿನ ಪಾಟಲೀಪುತ್ರ (ಪಾಟ್ನಾ) ನಗರವಿತ್ತು. ಇದು ಕ್ರಿಸ್ತಶಕ 427 ರಿಂದ 1197 ರವರೆಗೆ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈ ನಳಂದ ವಿಶ್ವವಿದ್ಯಾಲಯವು ಕಲೆ ಮತ್ತು ಸಾಹಿತ್ಯದಲ್ಲಿ ಅಂದಿನ ಕಾಲದಲ್ಲೇ ಬಹು ಪ್ರಸಿದ್ಧಿಯನ್ನು ಪಡೆದಿತ್ತು. ಈ ಕಾಲವನ್ನು 'ಭಾರತದ ಶೈಕ್ಷಣಿಕ ಸುವರ್ಣಯುಗ' ಎಂದು ಪಂಡಿತರು ಕರೆದಿದ್ದಾರೆ.

## ಗುಪ್ತರ ಕಾಲದಲ್ಲಿ ಆರಂಭ

ಈ ನಳಂದ ವಿಶ್ವವಿದ್ಯಾಲಯವನ್ನು ಗುಪ್ತರ ಕಾಲದಲ್ಲಿ (ಮೂರರಿಂದ ಆರನೆಯ ಶತಮಾನ) ಆರಂಭಿಸಲಾಯ್ತು. ಇದಕ್ಕೆ ಬುದ್ಧ ಪಂಡಿತರ ಸಹಕಾರ ಅನನ್ಯ. ಇದನ್ನು ಕ್ರಿ.ಶ. 1200 ರಲ್ಲಿ ಭಾರತದ ಮೇಲೆ ಧಾಳಿ ಮಾಡಿದ ಮೊಹಮದ್ ಬಕ್ತಿಯಾರ್ ಖಿಲ್ಜಿ ಸಂಪೂರ್ಣ ನಾಶ ಮಾಡಿದ!

ಸುಮಾರು 750 ವರ್ಷಗಳ ಕಾಲ ಅವ್ಯಾಹತವಾಗಿ ನಡೆದುಬಂದ ಈ ವಿಶ್ವವಿದ್ಯಾಲಯದಲ್ಲಿ ಅಂದಿನ ಬೌದ್ಧ ಪಂಡಿತರು ಶಿಕ್ಷಕರಾಗಿದ್ದರು. ಬೌದ್ಧ ತತ್ವಜ್ಞಾನಿಗಳಾದ ಮಾಧ್ಯಮಕ, ಯೋಗಚರ ಮತ್ತು ಸರ್ವಾಸ್ತಿವಾದ ಮುಂತಾದ ಪಂಡಿತರು ಇಲ್ಲಿದ್ದರು. ಇಲ್ಲಿ ವೇದ, ವ್ಯಾಕರಣ, ವೈದ್ಯ, ತರ್ಕಶಾಸ್ತ್ರ, ಗಣಿತಶಾಸ್ತ್ರ, ಖಗೋಳ ಶಾಸ್ತ್ರ, ರಸಾಯನ ಶಾಸ್ತ್ರಗಳನ್ನು ಕಲಿಸಲಾಗುತ್ತಿತ್ತು. ಇದರ ಖ್ಯಾತಿ ಅಂದಿನ ಚೀನಾಕ್ಕೂ ಹರಡಿತ್ತು.

ಇದು ಇಂದು ವಿಶ್ವ ಪರಂಪರೆಯ ತಾಣವಾಗಿ ವಿಶ್ವಸಂಸ್ಥೆಯಿಂದ ಗುರುತಿಸಲ್ಪಟ್ಟಿದೆ.

**– ಅಂಕಿತ ಆರ್**
ಪ್ರಥಮ ಬಿ.ಎ.

## ಮೋತಿಲಾಲ್ ನೆಹರೂ ಅವರ ಜನ್ಮದಿನದ ವಿಶೇಷ



ಭಾರತದ ಮೊದಲ ಪ್ರಧಾನಮಂತ್ರಿ ಜವಾಹರಲಾಲ ನೆಹರೂರವರ ತಂದೆ ಮೋತಿಲಾಲ್ ನೆಹರೂರವರ ಜನ್ಮದಿನದ ಅಂಗವಾಗಿ ಈ ಲೇಖನದ ಮೂಲಕ ಅವರ ಕಿರುಪರಿಚಯ ನೀಡಲಾಗುತ್ತಿದೆ. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯ ಪಾಲುದಾರರಾಗಿದ್ದ ಇವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಮುಖ ನಾಯಕರಾಗಿದ್ದರು. ಅವರು 1919–1920 ಮತ್ತು 1928–29 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಮೋತಿಲಾಲ್ ನೆಹರೂ 6 ಮೇ 1861 ರಂದು ಜನಿಸಿದರು. ಇವರ ತಂದೆ ಗಂಗಾಧರ ನೆಹರು, ತಾಯಿ ಜೀವಾರಾನಿ (ಅಥವಾ ಜೆರೋನಿ). ನೆಹರೂ ಕುಟುಂಬವು ದೆಹಲಿಯಲ್ಲಿ ಅನೇಕ ತಲೆಮಾರುಗಳವರೆಗೆ ನೆಲೆಸಿತ್ತು.

ಮೋತಿಲಾಲ್ ನೆಹರು ಎರಡು ಬಾರಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಒಮ್ಮೆ ಅಮೃತಸರದಲ್ಲಿ (1919) ಮತ್ತು ಎರಡನೆಯ ಬಾರಿ ಕಲ್ಕತ್ತಾದಲ್ಲಿ (1928), ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಅವರನ್ನು ಬಂಧಿಸಲಾಯಿತು. ಗಾಂಧಿಯವರ ಸಮೀಪವರ್ತಿಯಾಗಿದ್ದರೂ ಕೂಡ ಉತ್ತರ ಪ್ರದೇಶದ ಚೌರಿಚೌರಾದಲ್ಲಿ ನಡೆದ ಗಲಭೆಯ ಕಾರಣಕ್ಕೆ ಅಸಹಕಾರ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಂಡ ಗಾಂಧಿಯವರ ನಿರ್ಧಾರವನ್ನು ಬಹಿರಂಗವಾಗಿ ಟೀಕಿಸಿದರು.


ನಂತರ ಮೋತಿಲಾಲ್ ಸ್ವರಾಜ್ ಪಾರ್ಟಿಯಲ್ಲಿ ಸೇರಿಕೊಂಡರು. ಅದು ಬ್ರಿಟಿಷ್ ಪ್ರಾಯೋಜಿತ ಪರಿಷತ್ ಪ್ರವೇಶಿಸಲು ಯತ್ನಿಸಿತು. ಮೋತೀಲಾಲರನ್ನು ಯುನೈಟೆಡ್ ಪ್ರಾವಿನ್ಸ್ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಚುನಾಯಿಸಲಾಯಿತು. 1923 ರಲ್ಲಿ ಬ್ರಿಟಿಷ್ ಭಾರತದ ಹೊಸ ಸೆಂಟ್ರಲ್ ಶಾಸನ ಸಭೆಗೆ ಹೊಸ ದೆಹಲಿಯಲ್ಲಿ ಚುನಾಯಿತರಾದರು ಮತ್ತು ಪ್ರತಿಪಕ್ಷದ ನಾಯಕರಾದರು. ಮಾರ್ಚ್ 1926 ರಲ್ಲಿ ಮೋತಿಲಾಲ್ ನೆಹರು ಮತ್ತು ಅವರ ಸಹೋದ್ಯೋಗಿಗಳು ತಮ್ಮ ಅಸೆಂಬ್ಲಿ ಸ್ಥಾನಗಳಿಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಪಕ್ಷಕ್ಕೆ ಮರಳಿದರು.


**ನೆಹರೂ ವರದಿ**


ಮೋತಿಲಾಲ್ ನೆಹರೂ ಅವರು 1928 ರಲ್ಲಿ ಪ್ರಖ್ಯಾತ ನೆಹರು ಆಯೋಗದ ಅಧ್ಯಕ್ಷರಾಗಿದ್ದರು. ಬ್ರಿಟಿಷ್ ಸೈಮನ್ ಆಯೋಗಕ್ಕೆ ಪ್ರತಿಯಾಗಿ ಭಾರತೀಯರು ಬರೆದ ಮೊದಲ ಸಂವಿಧಾನದ ನೆಹರು ವರದಿ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಕೆನಡಾ ಸಾಮ್ರಾಜ್ಯದೊಳಗೆ ಭಾರತಕ್ಕೆ ಒಂದು ಪರಮಾಧಿಕಾರದ ಸ್ಥಾನಮಾನವನ್ನು ಕಲ್ಪಿಸಿತು.

ಇದನ್ನು ಕಾಂಗ್ರೆಸ್ ಪಕ್ಷವು ಅನುಮೋದಿಸಿತು. ಆದರೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೋರುತ್ತಿದ್ದ ಹೆಚ್ಚಿನ ರಾಷ್ಟ್ರೀಯತಾವಾದಿ ಭಾರತೀಯರು ಈ ವರದಿಯನ್ನು ತಿರಸ್ಕರಿಸಿದರು.

**– ಸುಮಂತ್‌ರಾಜ್ ಡಿ.ಎಸ್**
ಪ್ರಥಮ ಬಿ.ಎ.





# ಜಗದ್ಗುರು ಬಸವಣ್ಣ



| | |
|---|---|
| ಕಾಲಾವಧಿ | : 1134–1168 |
| ಜನಿಸಿದ್ದು | : ಕರ್ನಾಟಕ |
| ಜನಪ್ರಿಯ ಹೆಸರು | : ಅಣ್ಣ |
| ವೃತ್ತಿ | : ಲೆಕ್ಕಿಗ |
| ನಿವೃತ್ತಿ | : ಮಂತ್ರಿ |
| ಪ್ರವೃತ್ತಿ | : ಸಮಾಜ ಸುಧಾರಣೆ |
| ಚಿಂತನ ಭಾಷೆ | : ಕನ್ನಡ |
| ಚಿಂತನ ಮಾರ್ಗ | : ವಚನ ರಚನೆ |
| ಚಿಂತನ ಕ್ರಮ | : ವರ್ಣಾಶ್ರಮ ವಿರೋಧ |
| ಚಿಂತನೆ ಸಂದೇಶ | : ಕಾಯಕವೇ ಕೈಲಾಸ |
| ಬರೆದ ವಚನಗಳು | : 1500 |
| ಸಾಧನೆ | : ಅನುಭವ ಮಂಟಪ ಸ್ಥಾಪನೆ, ಪ್ರಥಮ ಜನ ಸಂಸತ್ |
| ಸ್ಥಾಪನೆ | : ಲಿಂಗಾಯತ ಸ್ವತಂತ್ರ ಧರ್ಮ |
| ಪ್ರಸ್ತುತ | : "ಕರ್ನಾಟಕದ ಸಾಂಸ್ಕೃತಿಕ ನಾಯಕ" |

**ಬಸವಣ್ಣನವರ ವಚನಗಳು**

ಸಾರ ಸಜ್ಜನರ ಸಂಗವೇ ಲೇಸು
ಕಂಡಯ್ಯ ।
ದೂರ ದುರ್ಜನರ ಸಂಗವದು ಭಂಗವಯ್ಯ !
ಸಂಗವೆರಡುಂಟು –
ಒಂದ ಬಿಡು, ಒಂದ ಹಿಡಿ
ಮಂಗಳಮೂರ್ತಿ ನಮ್ಮ
ಕೂಡಲ ಸಂಗನ ಶರಣ

ಸಕಲ ಕ್ರಿಯೆಗಳಿಗಿದು ಕವಚ
ಸಕಲವಶ್ಯಕ್ಕಿದು ಶುಭತಿಲಕ
ಸಕಲಸಂಪದಕ್ಕೆ ತಾಣವಿದು
ಅಘಟಿತ ಘಟಿತವೆನಿಸುವ ಅನುಪಮ ತ್ರಿಪುಂಡ್ರ
ಅಣುಮಾತ್ರ ವಿಭೂತಿಯ ಪಣಿಯೊಳಿದೆ
ಎಣಿಕೆಯಿಲ್ಲದ ಭವಪಾಶ ಪರಿವುದು
ತ್ರಿಣಯ ನೀನೊಲಿದು ಧರಿಸಿದೆಯೆಂದೆನೆ,
ಆನು ಧರಿಸಿ ಬದುಕಿದೆ ಕೂಡಲ ಸಂಗಯ್ಯಾ

---

ಲಿಂಗವೆ ಅಂಗ, ಅಂಗವೆ ಲಿಂಗವೆಂದರಿದ ಬಳಿಕ ಅಲ್ಲಿಯೇ ಅದೆ
ಲಿಂಗವೆ ಪ್ರಾಣ, ಪ್ರಾಣವೆ ಲಿಂಗವೆಂದರಿದ ಬಳಿಕ ಅಲ್ಲಿಯೆ ಅದೆ
ಉಂಟೆಂದು ತೋರಲಿಲ್ಲ, ಇಲ್ಲವೆಂದು ಅರಸಲಿಲ್ಲ
ಕೂಡಲಸಂಗಮದೇವಾ, ಲಿಂಗ ನಿರಂತರವಲ್ಲಿಯೇ

---

ಅಂಜಿದರಾಗದು, ಅಳುಕಿದರಾಗದು !
ವಜ್ರಪಂಜರದೊಳಗಿದ್ದರಾಗದು !
ತಪ್ಪದೆಲವೋ ಲಲಾಟಲಿಖಿತ !
ಕಕ್ಕುಲತೆಬಟ್ಟರಾಗದು ನೋಡಾ !
ಧೃತಿಗೆಟ್ಟು ಮನ ಧಾತುಗೆಟ್ಟರೆ
ಅಪ್ಪುದು ತಪ್ಪುದು ಕೂಡಲಸಂಗಮದೇವಾ

---

ಬಚ್ಚಲ ನೀರು ತಿಳಿಯಾದಡೇನು?
ಸಲ್ಲದ ಹೊನ್ನು ಮತ್ತೆಲ್ಲಿದ್ದಡೇನು?
ಆಕಾಶದ ಮಾವಿನ ಫಲವೆಂದಡೇನು?
ಕೊಯ್ಯಲಿಲ್ಲ ಮೆಲ್ಲಲಿಲ್ಲ
ಕೂಡಲಸಂಗಮದೇವನ ಸರಣರ
ಅನುಭಾವವಿಲ್ಲದವರು ಎಲ್ಲಿದ್ದಡೇನು
ಎಂತಾದಡೇನು?

---

ನೀನೊಲಿದರೆ ಕೊರಡು ಕೊನರುವುದಯ್ಯ
ನೀನೊಲಿದರೆ ಬರಡು ಹಯನಹುದಯ್ಯ
ನೀನೊಲಿದರೆ ವಿಷಯಮೃತವಹುದಯ್ಯ
ನೀನೊಲಿದರೆ ಸಕಲ ಪಡಿಪದಾರ್ಥ
ಇದಿರಲಿಪ್ಪವು ಕೂಡಲಸಂಗಮದೇವ

**– ತೇಜಸ್ವಿನಿ ಎನ್.ಆರ್**
ದ್ವಿತೀಯ ಬಿ.ಎಸ್ಸಿ



## Release of Department Magazine
## 'Kadamba Rajatha Maale' - Vol. 1




ನಂ1 ವಿಜಯವಾಣಿ
VIJAYAVANI » MYSURU
ಮೈಸೂ

# ಕದಂಬ ರಜತ ಮಾಲೆಯಲ್ಲಿ ಸೃಜನಶೀಲ ಬರವಣಿಗೆ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ 'ಕದಂಬ ರಜತ ಮಾಲೆ' ಸಂಪುಟ-01 ಕೃತಿಯನ್ನು ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕಿ ಡಾ.ಎ.ಎಚ್.ಎಂ.ವಿಜಯಲಕ್ಷ್ಮೀ ಬಿಡುಗಡೆ ಮಾಡಿದರು.

» **ಡಾ.ಎ.ಎಚ್. ಎಂ.ವಿಜಯಲಕ್ಷ್ಮೀ ಅಭಿಮತ**

ಈ ಸಂಚಿಕೆಯು ಅತ್ಯುತ್ತಮವಾದ ಲೇಖನಗಳು, ವರದಿಗಳು, ಪತ್ರಿಕಾ ಪ್ರಕಟಣೆಗಳು, ವಿವಿಧ ಚಟುವಟಿಕೆಗಳ ಛಾಯಾಚಿತ್ರ ಒಳಗೊಂಡಿದ್ದು, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಸಮಾನವಾದ ಆದ್ಯತೆಯನ್ನು ನೀಡಲಾಗಿದೆ. ವಿದ್ಯಾರ್ಥಿಗಳು ಬರೆದಿರುವ ಲೇಖನಗಳಲ್ಲಿ ವಿಮರ್ಶೆ, ವಿಶ್ಲೇಷಣೆಯ ಪ್ರಬುದ್ಧತೆಯು ಎದ್ದು ಕಾಣುತ್ತದೆ. ಜತೆಗೆ ವಿದ್ಯಾರ್ಥಿಗಳ ಸೃಜನಶೀಲತೆ ಹಾಗೂ ಕ್ರಿಯಾಶೀಲ ಬರವಣಿಗೆ ಆಸಕ್ತಿಯನ್ನು ಕಾಣಬಹುದು. ಇಂತಹ ವಿಭಿನ್ನವಾದ ಶೈಕ್ಷಣಿಕ ಕಾರ್ಯಚಟುವಟಿಕೆಗಳು ನಿರಂತರವಾಗಿ ಮೂಡಿಬರಲಿ ಎಂದು ಅವರು ಹೇಳಿದರು. ಇತಿಹಾಸ ಅರಿಯದವನು ಇತಿಹಾಸ ಸೃಷ್ಟಿಸಲಾರ ಎಂಬ ಧ್ಯೇಯದೊಂದಿಗೆ ಸಾಮಾನ್ಯ ವಿಷಯ ಜ್ಞಾನ, ಐತಿಹಾಸಿಕ ಅರಿವು ಹಾಗೂ ಸೃಜನಶೀಲ ಬರವಣಿಗೆಯ ಆಸಕ್ತಿ ಮತ್ತು ಕೌಶಲವನ್ನು ಮುನ್ನೆಲೆಗೆ ತಂದು ಅದನ್ನು ಅನಾವರಣಗೊಳಿಸುವ ಹಾಗೂ ಪ್ರಕಟಿಸುವ ಇತಿಹಾಸ ವಿಭಾಗದ ಮಾಸಿಕ ಸಂಚಿಕೆಯೇ ಕದಂಬ. ಕಳೆದ 2015ರಿಂದ ಇಲ್ಲಿಯವರೆಗೂ ಸುಮಾರು 42 ಮಾಸಿಕ ಸಂಚಿಕೆಗಳನ್ನು ಪ್ರಕಟಿಸಲಾಗಿದೆ ಎಂದರು.

ಕದಂಬ ಸಂಚಿಕೆಯು ಪ್ರತಿ ಶೈಕ್ಷಣಿಕ ಚಾತುರ್ಮಾಸದಲ್ಲಿ ನಡೆಯುವ ವಿಭಾಗದ ಎಲ್ಲ ಶೈಕ್ಷಣಿಕ ಹಾಗೂ ಪಠ್ಯೇತರ ಚಟುವಟಿಕೆಗಳ ಸಮಗ್ರ ಮಾಹಿತಿಗಳು, ಛಾಯಾಚಿತ್ರಗಳು, ಪತ್ರಿಕಾ ಪ್ರಕಟಣೆಗಳನ್ನೊಳಗೊಂಡಂತೆ ವಿವಿಧ ಚಾರಿತ್ರಿಕ ವಿಷಯಗಳ ಕುರಿತು ವಿದ್ಯಾರ್ಥಿಗಳು ಬರೆದಿರುವ ಲೇಖನಗಳು, ಪ್ರಬಂಧ, ವರದಿ, ವಿಭಾಗದ ಅಧ್ಯಾಪಕರ ಲೇಖನಗಳು, ಶೈಕ್ಷಣಿಕ ಸಾಧನೆಗಳು, ಪಠ್ಯೇತರ ಚಟುವಟಿಕೆಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಕೊಡುಗೆಯನ್ನು ಈ ಸಂಚಿಕೆಯು ಒಳಗೊಂಡಿದೆ ಎಂದು ವಿವರಿಸಿದರು.

ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥ, ಶೈಕ್ಷಣಿಕ ಡೀನ್ ಡಾ. ಎಚ್.ಶ್ರೀಧರ, ಡಾ.ಎಚ್.ಆರ್. ತಿಮ್ಮೇಗೌಡ, ಎ.ಆರ್.ನಂದೀಶ್, ಜಯಲಕ್ಷ್ಮೀ ಇತರರು ಇದ್ದರು.

ವಿಜಯವಾಣಿ ಚಿತ್ರ




ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಕದಂಬ ರಜತ ಮಾಲೆ' ಸಂಪುಟ-01 ಕೃತಿಯನ್ನು ಡಾ.ಎ.ಎಚ್. ಎಂ.ವಿಜಯಲಕ್ಷ್ಮೀ ಬಿಡುಗಡೆ ಮಾಡಿದರು.



**ಬಿ.ಎ. ಪದವಿ ಪಡೆದ ನಮ್ಮ ಕಾಲೇಜಿನ 5 ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಇತಿಹಾಸ ಸ್ನಾತಕೋತ್ತರ ಪದವಿಗೆ (ಎಂ.ಎ.) ಪ್ರವೇಶಾತಿ ಪಡೆದಿರುತ್ತಾರೆ.**



**ಸಾಗರ್**



**ಮನು ಬಿ.ಕೆ**



**ನಾಗರಾಜು**



**ಲಾವಣ್ಯ**



**ಸಂದರ್ಶ**

# Best Volunteers of Mahajana - 2023-24 (VoMC)



**Shashank M.S. Gowda**
Final Year BCA



**Chandu S**
Final Year BBA



# Valedictory Programme of VoMC - 13.5.2024








# VoMC in Mega Picture - 2023-24



ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




**ಸಂಚಿಕೆ: 44 ಸೆಪ್ಟೆಂಬರ್ 2024** | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | **www.mahajana.edu.in** | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | **ಪುಟಗಳು: 08**



## ಸಂಪಾದಕೀಯ

## ಕರ್ನಾಟಕದ ಹಬ್ಬಗಳ ವೈಶಿಷ್ಟ್ಯಪೂರ್ಣತೆ

ಭಾರತವು ಮೂಲತಃ ಕೃಷಿ ಪ್ರಧಾನವಾದ ದೇಶ. ಇಲ್ಲಿಯದು ಗ್ರಾಮೀಣ ಸಮಾಜ. ಇಲ್ಲಿನ ಜನರ ದೈನಂದಿನ ಜೀವನವು ಏಕತಾನತೆ ಮತ್ತು ಶ್ರಮದಾಯಕವಾಗಿದೆ. ಪ್ರಾತಃಕಾಲ ಬಾನಲ್ಲಿ ಬೆಳ್ಳಿಚುಕ್ಕಿ ಮೂಡುವ ಸಮಯಕ್ಕೆ ಎದ್ದು, ಬಸವನನ್ನು ಹೂಡಿಕೊಂಡು ಮನೆಬಿಟ್ಟರೆ ಮುಗಿಯಿತು. ಅವರು ಹಿಂದಿರುಗುವುದು ಹೊತ್ತು ಮುಳುಗಿದ ಮೇಲೆಯೇ. ಬೆಳಗಿನಿಂದ ಸಂಜೆಯವರೆಗೆ ಹೊಲಗಳಲ್ಲಿ ಶ್ರಮವಹಿಸಿ ದುಡಿಯುವ ರೈತನಿಗೆ ಬಿಡುವು ಸಿಗುವುದು ರಾತ್ರಿ ಮಲಗಿದಾಗ ಮಾತ್ರ.

ಹೀಗಾಗಿ ನಮ್ಮ ಪೂರ್ವಜರು ಈ ಏಕತಾನತೆಯಿಂದ ಹೊರಬರಲು ಪ್ರತಿ ಅಮವಾಸ್ಯೆ ಮತ್ತು ಹುಣ್ಣಿಮೆಗಳಂದು ಯಾವುದಾದರೊಂದು ದೇವರ ಹೆಸರಿಗೆ ಸಮರ್ಪಿಸಿ ಸಮಾರಂಭಗಳನ್ನು ಆಚರಿಸತೊಡಗಿದರು. ಕೊನೆಯ ಪಕ್ಷ ಈ ದಿನಗಳಾದರೂ ಸಹ ಎಲ್ಲರೊಟ್ಟಿಗೆ ಸೇರಿ ತಮ್ಮ ದೈನಂದಿನ ಜೀವನದ ಕಷ್ಟ ಕಾರ್ಪಣ್ಯ, ಏಕತಾನತೆಗಳನ್ನು ಬದಿಗಿಟ್ಟು ಉತ್ಸವಗಳನ್ನು ಆಚರಿಸುವ ಮೂಲಕ ಸಿಹಿಯುಂಡು ಸಂತೋಷಪಡುತ್ತಿದ್ದರು. ಇದೇ ಮುಂದೆ ಹಬ್ಬಗಳಾಗಿ ರೂಪುಗೊಂಡಿತು.

ಕರ್ನಾಟಕದಲ್ಲಿ ಬಹುತೇಕ ಹಬ್ಬಗಳು ಹುಣ್ಣಿಮೆಯ ದಿನದಂದು ಬರುತ್ತವೆ. (ಇದರರ್ಥ ಹಬ್ಬಗಳು ಅಮವಾಸ್ಯೆಯ ದಿನದಂದು ಇಲ್ಲವೆಂದಲ್ಲ). ಆದ್ದರಿಂದಲೇ ಹಬ್ಬ ಹುಣ್ಣಿಮೆಗಳು ಎಂಬ ಪದ ಚಾಲ್ತಿಯಲ್ಲಿದೆ.

### ಪ್ರಮುಖ ಹಬ್ಬಗಳು

### ಕಾರ ಹುಣ್ಣಿಮೆ

ಮಳೆಗಾಲದ ಆರಂಭಕ್ಕೆ ಮೊದಲು ಮತ್ತು ಬೇಸಿಗೆಯ ಅಂತ್ಯಕ್ಕೆ ಬರುವ ಕಾರ ಹುಣ್ಣಿಮೆ ರೈತರಲ್ಲಿ ನವೋತ್ಸಾಹವನ್ನು ತರುವ ಹಬ್ಬವಾಗಿದೆ. ಈ ದಿನದಂದು ರೈತರು ತಮ್ಮ ಎಲ್ಲಾ ಕೃಷಿ ಉಪಕರಣಗಳನ್ನು ಪೂಜಿಸುವರು. ಎತ್ತುಗಳ ಮೈತೊಳೆದು ಕೋಡುಗಳಿಗೆ ಬಣ್ಣ ಹಚ್ಚಿ ಸಿಂಗರಿಸುವರು. ಅವುಗಳಿಗೆ ಕಿಚಡಿ ಬೆಲ್ಲಗಳನ್ನು ತಿನ್ನಿಸಿ "ಕರಿಹರಿಯುವುದು" ಎನ್ನುವ ಸ್ಪರ್ಧೆಗೆ ಅಣಿಗೊಳಿಸುತ್ತಾರೆ. ಇದರ ಆಧಾರದ ಮೇಲೆ ಮುಂಗಾರೀ ಮತ್ತು ಹಿಂಗಾರೀ ಮಳೆ ಬೆಳೆಗಳ ಭವಿಷ್ಯವನ್ನು ಲೆಕ್ಕ ಹಾಕಲಾಗುತ್ತದೆ.,

### ಮಣ್ಣೆತ್ತಿನ ಅಮವಾಸ್ಯೆ

ಮುಂಗಾರಿನ ಮಳೆಯಿಂದ ಹಳ್ಳಕೊಳ್ಳಗಳು ತುಂಬಿ ಹರಿಯುವ ಹೊತ್ತಿನಲ್ಲಿ ಮಣ್ಣೆತ್ತಿನ ಅಮವಾಸ್ಯೆ ಬರುವುದು. ದಿನದಂದು ಬೆಳಗ್ಗೆ ಎದ್ದು ಶುಚಿಯಾಗಿ ಹೊಸಬಟ್ಟೆಗಳನ್ನು ತೊಟ್ಟು ಸಡಗರ ಸಂಭ್ರಮದಿಂದ ಮಣ್ಣಿನ ಬಸವನ ಮೂರ್ತಿಗಳನ್ನು ಮಾಡುವರು. ಅವುಗಳನ್ನು ಭಕ್ತಿಯಿಂದ ಪೂಜಿಸಿ ನಂತರ ನೀರಿನಲ್ಲಿ ವಿಸರ್ಜಿಸಲಾಗುತ್ತದೆ. ಇದೇ ಆಷಾಢ ಮಾಸದಲ್ಲಿ ಗುಳ್ಳವ್ವ ಮತ್ತು ಗೌರಿ ಹಬ್ಬಗಳನ್ನು ಆಚರಿಸುತ್ತಾರೆ.

### ನಾಗರ ಪಂಚಮಿ

ಶ್ರಾವಣ ತಿಂಗಳಲ್ಲಿ ಬರುವ ನಾಗರ ಪಂಚಮಿ ಹಬ್ಬ ಬಹು ಜನಪ್ರಿಯವಾದ ಹಬ್ಬ. ಹೊಸದಾಗಿ ಮದುವೆಯಾದ ಮದುಮಗಳು ಗಂಡನ ಮನೆಯಿಂದ ತವರು ಮನೆಗೆ ಬರುತ್ತಾಳೆ. ಹಸಿರು ಸೀರೆಯುಟ್ಟು ಕೈ ತುಂಬ ಬಳೆತೊಟ್ಟು, ನಾಗದೇವಗೆ ಹಾಲನ್ನು ಎರೆದು ಭಕ್ತಿಯಿಂದ ಪೂಜಿಸಲಾಗುತ್ತದೆ.

ಊರಿನಲ್ಲಿನ ದೊಡ್ಡ ದೊಡ್ಡ ಮರಗಳಿಗೆ ಜೋಕಾಲಿಯನ್ನು ಕಟ್ಟಿರುತ್ತಾರೆ. ಈಟಿಜಿಟಿ ಬೀಳುವ ಮಳೆಯಲ್ಲಿ ಸ್ತ್ರೀಪುರುಷ ಬೇಧವಿಲ್ಲದೆ ಎಲ್ಲರೊಟ್ಟಿಗೆ ಸೇರಿ ಜೋಕಾಲಿಗಳ ಜೀಕಿ ಆನಂದಿಸುತ್ತಾರೆ. ಉಂಡಿ, ಕರ್ಜಿಕಾಯಿಗಳು ಈ ಹಬ್ಬದ ವೈಶಿಷ್ಟ್ಯಪೂರ್ಣ ಸಿಹಿತಿನಿಸುಗಳಾಗಿವೆ.

### ಗಣೇಶ ಚತುರ್ಥಿ

ಭಾದ್ರಪದ ಚೌತಿಯ ದಿನದಂದು ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಗರಕೆ, ಹೂವು, ಹಣ್ಣು, ಕಾಯಿಗಳಿಂದ ಪೂಜಿಸಿ, ಹೂರಣದ ಕಡುಬಿನ ನೈವೇದ್ಯವನ್ನು ಗಣೇಶನಿಗೆ ಅರ್ಪಿಸುವರು. ತಮ್ಮ ಭಕ್ತಿಗನುಸಾರವಾಗಿ ಒಂದರಿಂದ ಏಳು ದಿನಗಳವರೆಗೆ ಗಣಪತಿಯನ್ನು ಪೂಜಿಸಿ ನಂತರ ಮೆರವಣಿಗೆಯ ಮೂಲಕ ವಿಜೃಂಭಣೆಯಿಂದ ಹೊತ್ತೊಯ್ದು ನೀರಿನಲ್ಲಿ ವಿಸರ್ಜಿಸುವರು.

**ಪು.ತಿ.ನೋ.**

**ನವರಾತ್ರಿ**

ಅಶ್ವಿಜ ಶುದ್ಧ ಪ್ರತಿಪದುದಗೆ ದೇವಿಯರಿಗೆ ಭಕ್ತರು ಉಪವಾಸವನ್ನು ಆಚರಿಸುವರು. ಈ ದಿನದಲ್ಲಿ ನವರಾತ್ರಿಯ ಹಬ್ಬ ಬರುತ್ತದೆ. ಪ್ರತಿದಿನವು ನಂದಾದೀಪವನ್ನು ಹಚ್ಚಿಟ್ಟು ಸಂಭ್ರಮದಿಂದ ಪೂಜೆ ಪುನಸ್ಕಾರಗಳನ್ನು ಮಾಡುವರು. ಚಿಕ್ಕ ಮಡಿಕೆಗಳಲ್ಲಿ ಸಸಿಗಳನ್ನು ಬೆಳೆಸಿ ದಸರೆಯ ದಿವಸ ಸೀಮೋಲ್ಲಂಘನ ಮಾಡಿ ಬನ್ನಿ ಗಿಡಗಳನ್ನು ಪೂಜಿಸುವರು. ಅಂದು ಬನ್ನಿಯನ್ನು ರಾತ್ರಿ ಪರಸ್ಪರ ಹಂಚಿಕಂಡು ಬಂಗಾರದಂತೆ ಇರೋಣವೆಂದು ಆನಂದಿಸಿಕೊಳ್ಳುತ್ತಾರೆ.

**ದೀಪಾವಳಿ ಹಬ್ಬ**

ಅಶ್ವಿಜ ಶುದ್ಧ ಚತುರ್ದಶಿಗೆ ಆರಂಭವಾದ ದೀಪಾವಳಿಯು ಕಾರ್ತಿಕ ಶುದ್ಧ ಪಂಚಮಿಗೆ ಕೊನೆಗೊಳ್ಳುವುದು. ಪುರುಷರು ಬೆಳಿಗ್ಗೆ ಬೇಗನೆ ಎದ್ದು ಎಣ್ಣೆ ಸ್ನಾನ ಮಾಡಿ ಸಹೋದರಿಯರಿಂದ ಆರತಿಯನ್ನು ಮಾಡಿಸಿಕೊಳ್ಳುವರು. ಈ ದಿನಗಳಲ್ಲಿ ವ್ಯಾಪಾರಸ್ಥರು ತಮ್ಮ ಅಂಗಡಿ ಮುಂಗಟ್ಟುಗಳಲ್ಲಿ ಲಕ್ಷ್ಮೀ ಪೂಜೆಯನ್ನು ಮಾಡುವರು.

**ಎಳ್ಳಮವಾಸ್ಯೆ**

ಎಳ್ಳಮವಾಸ್ಯೆಯ ದಿನ ಸ್ತ್ರೀಯರು ವಿಶೇಷ ತಿಂಡಿ–ತಿನಿಸುಗಳಾದ ಕಡುಬು, ಹೋಳಿಗೆ, ಸಜ್ಜೆರೊಟ್ಟಿ, ಹಿಂಡಿಪಲ್ಯ, ಅನ್ನ ಸಾರು ಮೊಸರುಗಳನ್ನು ಬುಟ್ಟಿಯಲ್ಲಿಟ್ಟುಕೊಂಡು ಹೊಲಕ್ಕೆ ಹೋಗಿ ಹೊಲದಲ್ಲಿ ಬೆಳೆದ ಬೆಳೆಗಳಿಗೆ ಪೂಜೆಯನ್ನು ಸಲ್ಲಿಸಿ ನೈವೇದ್ಯ ಮತ್ತು ತೀರ್ಥವನ್ನು ಹೊಲದ ತುಂಬ "ಹುಲ್ಲು ಹುಲ್ಲಿಗೆ ಚಲ್ಲು ಹೋಳಿಗೆ" ಎಂದು ಹಾಡುತ್ತಾ ಎರಚುವರು. ತಮ್ಮ ಆತ್ಮೀಯರೊಂದಿಗೆ ಹೊಲದಲ್ಲೇ ಊಟವನ್ನು ಮುಗಿಸಿಕೊಂಡು ಆನಂದಿಸಿ ಸಂಜೆ ಮನೆಗೆ ಬರುವರು.

**ಶಿವರಾತ್ರಿ ಹಬ್ಬ**

ಬೇಸಿಗೆಯ ಪ್ರಾರಂಭ ಕಾಲದಲ್ಲಿ ಬರುವ ಶಿವರಾತ್ರಿಯ ದಿನದಂದು ಜನರು ಉಪವಾಸ ಮತ್ತು ಜಾಗರಣೆಗಳನ್ನು ಆಚರಿಸುತ್ತಾರೆ. ಗುಡಿಗಳಲ್ಲಿ ಸಾಮೂಹಿಕ ಶಿವನ ಪೂಜೆ ಭಜನೆಗಳು ನಡೆಯುತ್ತವೆ. ಆನರು ಶ್ರದ್ಧೆ ತ್ರಿಕರಣ ಶುದ್ಧಿ ಭಕ್ತಿಗಳಿಂದ ಶಿವನನ್ನು ಪೂಜಿಸಿ ಕೊಂಡಾಡುತ್ತಾರೆ. ಮಾರನೆಯ ದಿವಸ ಹಬ್ಬದ ಸಿಹಿತಿಂಡಿ ತಿನಸುಗಳನ್ನು ಮಾಡಿ ಹಬ್ಬವನ್ನು ಸಂಭ್ರಮದಿಂದ್ ಆಚರಿಸುವರು.

**ಯುಗಾದಿ ಹಬ್ಬ**

ಹೊಸ ವರ್ಷದ ಆರಂಭದ ಸಂಕೇತವಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ಆನರು ಬೇವು–ಬೆಲ್ಲವನ್ನು ಸವಿಯುವರು. ಇದು ಬರುವ ವರ್ಷದಲ್ಲಿ ಬರುವ ಎಲ್ಲಾ ಸುಖ–ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಸಾಂಕೇತಿಕವಾಗಿದೆ. ಹೋಳಿಗೆ ಮುಂತಾದ ಸಿಹಿಯೂಟಗಳು ಈ ಹಬ್ಬದ ವೈಶಿಷ್ಟ್ಯಗಳಾಗಿವೆ.

**– ಡಾ. ಶ್ರೀಧರ ಹೆಚ್**
ಶೈಕ್ಷಣಿಕ ಡೀನ್
ಹಾಗೂ
ಮುಖ್ಯಸ್ಥರು, ಇತಿಹಾಸ ವಿಭಾಗ

## ಬೆನಗಲ್ ರಾಮರಾವ್ – 1889–1969



ರಾಮರಾವ್ ಅವರು 1ನೇ ಜುಲೈ 1889 ರಂದು ಬೆನಗಲ್ ರಾಘವೇಂದ್ರರಾವ್ ಅವರ ಮಗನಾಗಿ ಜನಿಸಿದರು. ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮಂಗಳೂರಿನಲ್ಲಿ ಮುಗಿಸಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಿಂದ ಪದವಿ ಪಡೆದರು. ನಂತರ ಕಿಂಗ್ಸ್ ಕಾಲೇಜ್ ಕೇಂಬ್ರಿಡ್ಜ್‌ನಿಂದ ಉನ್ನತ ಪದವಿ ಪಡೆದರು.

ಅವರ ಹಿರಿಯ ಸಹೋದರ ನರಸಿಂಗರಾವ್ ಅವರಂತೆ ಇವರೂ ಸಹ 1989 ಐಸಿಎಸ್ ಸೇವೆಗೆ ಸೇರಿದರು. ನಾಗರಿಕ ಸೇವೆಯಲ್ಲಿ ಅವರು ಮದರಾಸು ಸರ್ಕಾರದಲ್ಲಿ 1924 ರವರೆಗೆ ಅಧೀನ ಕಾರ್ಯದರ್ಶಿ ಮತ್ತು ಉಪ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ನಂತರದಲ್ಲಿ ಅವರು ಹಣಕಾಸು ಇಲಾಖೆಯಲ್ಲಿ ತೆರಿಗೆ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. ಅದೇ ಇಲಾಖೆಯಲ್ಲಿ ಉಪಕಾರ್ಯದರ್ಶಿಯೂ ಆದರು.

ಬ್ರಿಟಿಷ್ ಸರ್ಕಾರ ನೇಮಿಸಿದ ಸೈಮನ್ ಕಮಿಷನ್ನಿನ ಆರ್ಥಿಕ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದರು. ನಂತರದ ದಿನಗಳಲ್ಲಿ ಔದ್ಯೋಗಿಕ ಖಾತೆಯ ಸಹಕಾರ್ಯದರ್ಶಿಯೂ ಆದರು ಮತ್ತು ದುಂಡುಮೇಜಿನ ಪರಿಷತ್‌ನ ಕಾರ್ಯದರ್ಶಿಯೂ ಆಗಿ ಸೇವೆ ಸಲ್ಲಿಸಿದರು.

ಬ್ರಿಟಿಷ್ ಸಂಸತ್ತು ಭಾರತ ಮಸೂದೆಯ ಸಲುವಾಗಿ ನೇಮಿಸಿದ ಜಂಟಿ ಸಮಿತಿಯಲ್ಲಿಯೂ ಸೇವೆ ಸಲ್ಲಿಸಿದರು. ಇವರ ಪರಿಣಿತಿ ಮತ್ತು ಅನುಭವವನ್ನು ಅವಲೋಕಿಸಿ ಅವರನ್ನು ಲಂಡನ್ನಿನಲ್ಲಿ ಭಾರತದ ಉಪ ಹೈಕಮಿಷನರ್ ಎಂದು ನೇಮಿಸಿದರು. ನಂತರ ಅವರು ದಕ್ಷಿಣ ಆಫ್ರಿಕಾದಲ್ಲಿ ಭಾರತದ ಹೈಕಮಿಷನರ್ ಆಗಿಯೂ ಸೇವೆ ಸಲ್ಲಿಸಿದರು.

ಭಾರತಕ್ಕೆ ಹಿಂತಿರುಗಿದ ನಂತರ ಅವರು ಮುಂಬೈ ಪೋರ್ಟ್ ಟ್ರಸ್ಟ್‌ನ ಛೇರ್‌ಮನ್ ಆಗಿ ಕಾರ್ಯ ನಿರ್ವಹಿಸಿದರು. ಸ್ವಾತಂತ್ರ್ಯದ ನಂತರ ಗೃಹಮಂತ್ರಿ ಸರ್ದಾರ್ ವಲ್ಲಭ್‌ಭಾಯಿ ಪಟೇಲರ ನಿರ್ಧಾರದಿಂದ ಐಪಿಎಸ್ ಅಧಿಕಾರಿಗಳ ಪರಿಣಿತಿ ಅನುಭವ ದೇಶಕ್ಕೆ ಲಭ್ಯವಾಗಲೆಂದು ವಿವಿಧ ಕ್ಷೇತ್ರಗಳಲ್ಲಿ ಅವರನ್ನು ನೇಮಿಸಿದರು.

ಇದರ ಅನುಸಾರವಾಗಿ ರಾಮರಾಯರು ಜಪಾನ್ ದೇಶಕ್ಕೆ ಭಾರತದ ರಾಯಭಾರಿಯಾಗಿ ಕಾರ್ಯನಿರ್ವಹಿಸಿದರು.



ನಂತರ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ರಾಯಭಾರಿ ಯಾದರು. ಆರ್ಥಿಕ ಕ್ಷೇತ್ರದಲ್ಲಿ ಅವರಿಗಿದ್ದ ಪರಿಣಿತಿ ಮತ್ತು ಅನುಭವದ ಆಧಾರದ ಮೇಲೆ ಅವರನ್ನು "ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್" ಎಂದು ನೇಮಿಸಿತು. ಅತ್ಯಂತ ದೀರ್ಘಕಾಲ ಸರ್ಕಾರದ ಕೇಂದ್ರ ಬ್ಯಾಂಕಿನ ನಿರ್ದೇಶನವನ್ನು ಮಾಡಿದರು.

ಇವರ ಸೇವೆಯನ್ನು ಗುರುತಿಸಿ ಬ್ರಿಟಿಷ್ ಸರ್ಕಾರ ಇವರಿಗೆ (CIE) ಪದವಿಯನ್ನು 1930 ರಲ್ಲಿ ಮತ್ತು ಕೆಸಿಐಇ (KCIE) ಪದವಿಯನ್ನು 1939 ರಲ್ಲಿ ನೀಡಿತು. 1969ರಲ್ಲಿ ನಿಧನ ಹೊಂದಿದರು.

**– ಚಂದನ್ ಎಂ**
ದ್ವಿತೀಯ ಬಿಎ

## ಕರ್ನಾಟಕ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳಾ ಹೋರಾಟಗಾರ್ತಿಯರು

ಕರ್ನಾಟಕದಲ್ಲಿಯೂ ಸ್ವಾತಂತ್ರ್ಯ ಹೋರಾಟದ ಕಾವು ಬ್ರಿಟಿಷರ ನಿದ್ರೆ ಕೆಡಿಸಿತ್ತು. ಕಾರ್ನಾಡ್ ಸದಾಶಿವರಾಯರು, ಎನ್.ಎಸ್.ಹರ್ಡಿಕರ್, ಕೆ.ಜಿ.ಗೋಖಲೆ, ನಿಜಲಿಂಗಪ್ಪ, ಹರ್ಡೇಕರ್ ಮಂಜಪ್ಪ, ನಿಟ್ಟೂರು ಶ್ರೀನಿವಾಸರಾಯರು ಇವರ ನೇತೃತ್ವದಲ್ಲಿ ಹೋರಾಟ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇವರ ಜೊತೆಯಲ್ಲಿಯೇ ಅನೇಕ ಮಹಿಳಾ ಮಣಿಗಳು ಹೋರಾಟದ ಕಣಕ್ಕಿಳಿದು ತಮ್ಮ ಸರ್ವಸ್ವವನ್ನೇ ದೇಶಕ್ಕಾಗಿ ಮುಡಿಪಿಟ್ಟರು.ಅವರುಗಳ ಕಿರುಪರಿಚಯ ಇಲ್ಲಿದೆ.

**ಉಲ್ಲಾಳದ ರಾಣಿ ಅಬ್ಬಕ್ಕ**

ಅಭಯರಾಣಿ ಎಂದೇ ಹೆಸರಾಗಿದ್ದ ಉಲ್ಲಾಳದ ರಾಣಿ, ಚೌಟ ವಂಶಕ್ಕೆ ಸೇರಿದವಳು. ಉಲ್ಲಾಳವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಈಕೆ, 4 ದಶಕಗಳ ಕಾಲ ಪೋರ್ಚುಗೀಸರನ್ನು ಕಟ್ಟಿಹಾಕಿದ್ದಳು. ಜೈನರು, ಹಿಂದೂಗಳು ಮತ್ತು ಮುಸ್ಲಿಮರಿದ್ದ ತನ್ನ ರಾಜ್ಯವನ್ನು ಸಕ್ಷಮವಾಗಿ ಆಳಿದ ಈಕೆ ತಾನು ಸಂಬಂಧ ಕಡಿದುಕೊಂಡಿದ್ದ ಪತಿಯ ಕುತಂತ್ರದಿಂದಲೇ ಸೋತು ಪ್ರಾಣ ತೆತ್ತದ್ದು ದುರಂತವೇ ಸರಿ. ಭಾರತದ ಇತಿಹಾಸವೇ ಹೀಗಲ್ಲವೇ? ಬೆನ್ನಿಗೆ ಚೂರಿ ಹಾಕುವ ಸ್ವಜನರೇ ಎಷ್ಟೋ ದುರಂತಗಳಿಗೆ ಮೂಲವಾಗಿದ್ದಾರೆ. ಆದರೆ ವಸಾಹತುಶಾಹಿಗಳ ವಿರುದ್ಧ ಹೋರಾಡಿದ ಪ್ರಥಮರಲ್ಲಿ ರಾಣಿ ಅಬ್ಬಕ್ಕ ಅತ್ಯಂತ ಪ್ರಮುಖಳು.

**ಚೆನ್ನಭೈರಾದೇವಿ**

'ಕಾಳುಮೆಣಸಿನ ರಾಣಿ' ಎಂದೇ ಖ್ಯಾತಳಾಗಿದ್ದ ಚೆನ್ನಭೈರಾದೇವಿ, ಸಾಳುವ ವಂಶದ ಧೀರರಾಣಿ. 54 ವರ್ಷಗಳ ಕಾಲ ಗೇರುಸೊಪ್ಪೆಯಲ್ಲಿ ಅಖಂಡ ಆಡಳಿತ ನಡೆಸಿದ ಈಕೆಯನ್ನು ಅವಳ ಪ್ರಜೆಗಳು ಪ್ರೀತಿಯಿಂದ ಅವ್ವರಸಿ ಎಂದು ಕರೆದರೆ, ಪೋರ್ಚುಗೀಸರು ರೈನಾದೆ ಪಿಮೆಂಟಾ ಎಂದು ಕರೆಯುತ್ತಿದ್ದರು. ಆ ಪ್ರದೇಶದಲ್ಲಿ ಹೇರಳವಾಗಿದ್ದ ಮೆಣಸನ್ನು ಯುರೋಪಿಗೆ ರಫ್ತು ಮಾಡುತ್ತಿದ್ದ ರಾಣಿ, ಬಹಳ ಜಾಣ್ಮೆಯಿಂದ ಬಿಜಾಪುರದ ಸುಲ್ತಾನರು, ಕೆಳದಿಯ ಅರಸರು ಮತ್ತು ಪೋರ್ಚುಗೀಸರನ್ನು ನಿಭಾಯಿಸಿದ್ದಳು. ಪೋರ್ಚುಗೀಸರ ವಿರುದ್ಧ ಎರಡು ಯುದ್ಧಗಳು ಮತ್ತು ಕೆಳದಿಯ ಅರಸರ ವಿರುದ್ಧದ ಯುದ್ಧಗಳನ್ನು ಚಾಣಾಕ್ಷವಾಗಿಯೇ ನಿಭಾಯಿಸಿದ ಚೆನ್ನಭೈರಾದೇವಿಯ ಸೋಲೂ, ತನ್ನ ಸೇನಾಧಿಪತಿಯ ಮೋಸದಿಂದಲೇ ಆಗುವುದು. ಟೆಕ್ಸಾಸ್ ವಿಶ್ವವಿದ್ಯಾನಿಲಯದ ಡಾ.ಹನ್ನಾಚಾಪೆಲ್ ವೋಜಿ ಹೋಸ್ಕಿ ಚೆನ್ನಭೈರಾದೇವಿಯನ್ನು ಇಂಗ್ಲೆಂಡಿನ ರಾಣಿ ಎಲಿಜಬೆತ್‌ಗೆ ಸರಿಸಮನಾದಳು ಎಂದು ಬಣ್ಣಿಸಿದ್ದಾರೆ. ಕಾದಂಬರಿಕಾರರಾದ ಗಜಾನನ ಶರ್ಮ ಆಳವಾದ ಅಧ್ಯಯನ ಮಾಡಿ ಇವಳದೇ ಹೆಸರಿನ ಕಾದಂಬರಿಯನ್ನು ರಚಿಸಿದ್ದಾರೆ.

**ಕಿತ್ತೂರು ರಾಣಿ ಚೆನ್ನಮ್ಮ**

ಭಾರತದಲ್ಲಿ ಪ್ರಪ್ರಥಮವಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ಮಹಿಳೆ ಎಂಬ ಖ್ಯಾತಿಯನ್ನು ತನ್ನದಾಗಿಸಿಕೊಂಡಿರುವ ಕೆಚ್ಚೆದೆಯ ರಾಣಿ ಚೆನ್ನಮ್ಮ. ತನ್ನ ಪತಿ ಮಲ್ಲಸರ್ಜನ ಮತ್ತು ಮಗನ ನಿಧನದ ನಂತರ, ದತ್ತು ಮಗನಿಗೆ ಪಟ್ಟಕಟ್ಟಬೇಕೆಂದು ಯೋಚಿಸಿದಾಗ, ಬ್ರಿಟಿಷರು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ಕಾನೂನನ್ನು ಮುಂದಿಟ್ಟು ಆಕೆಯನ್ನು ಬೆದರಿಸಿದಾಗ ಕೆರಳಿ ಹೋರಾಟಕ್ಕಿಳಿದವಳು ಚೆನ್ನಮ್ಮ. ಸಂಗೊಳ್ಳಿ ರಾಯಣ್ಣನಂತಹ ಬಂಟನ ಸಹಾಯದಿಂದ ಬ್ರಿಟಿಷರನ್ನು ಬಗ್ಗುಬಡಿದ ಚೆನ್ನಮ್ಮ 1824ರಲ್ಲಿ ನಡೆದ ಯುದ್ಧದಲ್ಲಿ ಸೆರೆಯಾಗುತ್ತಾಳೆ ಮತ್ತು 1829ರಲ್ಲಿ ಮರಣಿಸುತ್ತಾಳೆ. ಅವಳ ಜೀವನ ಮುಂದಿನ ಹೋರಾಟಗಾರರಿಗೆ ಸ್ಫೂರ್ತಿಯಾಯಿತು. 1961 ರಲ್ಲಿ ಪಂತಲು ಅವರ ನಿರ್ದೇಶನದಲ್ಲಿ ಬಂದ ಚೆನ್ನಮ್ಮನ ಜೀವನಾಧಾರಿತ ಚಿತ್ರದಲ್ಲಿ ಬಿ.ಸರೋಜಾದೇವಿ ಅವರು ಮಾಡಿರುವ ಅಮೋಘ ಅಭಿನಯ, ಚೆನ್ನಮ್ಮ ಹೀಗೆಯೇ ಇದ್ದಿರಬಹುದೇನೋ ಎಂಬ ಭ್ರಮೆ ಹುಟ್ಟಿಸುವಂತಿದೆ. 1920ರ ನಂತರ ಗಾಂಧೀಜಿ ಅವರ ನೇತೃತ್ವದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಹೋರಾಟ, ಅನೇಕ ಮಹಿಳೆಯರನ್ನು ಸೆಳೆಯಿತು. ಗಾಂಧೀಜಿ ಅವರ ಬೆಳಗಾವಿ ಭೇಟಿಯ ನಂತರ ಕರ್ನಾಟಕದಲ್ಲಿಯೂ ಗಾಂಧೀಜಿ ಪ್ರಭಾವದಿಂದ ಹೋರಾಟಕ್ಕಿಳಿದ ಅನೇಕ ಮಹಿಳೆಯರು ಬ್ರಿಟಿಷ್ ಸರ್ಕಾರವನ್ನು ನಡುಗಿಸಿದರು.

**– ಸುಮಂತ್ ರಾಜ್ ಡಿ.ಎಸ್.**
ದ್ವಿತೀಯ ಬಿಎ

## Special Lecture and Hiroshima and Nagasaki Bomb Diaster Photo Panel Exhibition - 29.08.2024
## Resource Person: Sri Manjunath H L, Senior Assistant Director, Regional Archives Office, Mysuru.










ಕನ್ನಡಪ್ರಭ

# ಐತಿಹಾಸಿಕ ದಾಖಲೆಗಳು ಡಿಜಿಟಲೀಕರಣಗೊಂಡಿವೆ

## ವಿಶೇಷ ಉಪನ್ಯಾಸದಲ್ಲಿ ಮೈಸೂರು ವಿಭಾಗೀಯ ಪತ್ರಾಗಾರ ಕಚೇರಿಯ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ್

• **ಕನ್ನಡಪ್ರಭ ವಾರ್ತೆ** ಮೈಸೂರು

ಸಾವಿರಾರು ಹಳೆಯ ಐತಿಹಾಸಿಕ ದಾಖಲೆಗಳನ್ನು ಹಾಗೂ ವರದಿಗಳನ್ನು ಇತ್ತೀಚೆಗೆ ಡಿಜಿಟಲೀಕರಣ ಗೊಳಿಸಲಾಗಿದೆ ಎಂದು ಮೈಸೂರು ವಿಭಾಗೀಯ ಪತ್ರಾಗಾರ ಕಚೇರಿಯ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ್ ಹೇಳಿದರು.

ನಗರದ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಮತ್ತು ಪಾರಂಪರಿಕ ಕೂಟ ಹಾಗೂ ಕರ್ನಾಟಕ ರಾಜ್ಯ ವಿಭಾಗೀಯ ಪತ್ರಾಗಾರ ಕಚೇರಿ ಸಹಯೋಗದಲ್ಲಿ ಚಾರಿತ್ರಿಕ ದಾಖಲೆಗಳ ಮಹತ್ವ ಮತ್ತು ಉಪಯೋಗ ವಿಷಯ ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಏರ್ಪಡಿಸಲಾಗಿತ್ತು.

ಈ ದಾಖಲೆಗಳು ಆಸಕ್ತ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಹಾಗೂ ಇತಿಹಾಸಕ್ತರಿಗೆ ಅತ್ಯಾಮೂಲ್ಯ ಪ್ರಾಥಮಿಕ ಅಧ್ಯಯನ ಸಾಮಗ್ರಿಗಳಾಗಿದ್ದು, ಇದುವರೆವಿಗೂ ಪ್ರಕಟವಾಗದಿರುವ ಹಲವು ವಿಷಯಗಳು ಹಾಗೂ ಮಾಹಿತಿಗಳು ಈ ದಾಖಲೆಗಳಿಂದ ಸಿಗುತ್ತವೆ. ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಈ ದಾಖಲೆಗಳನ್ನು ಸಮರ್ಥವಾಗಿ ಹಾಗೂ ಸಮರ್ಪಕವಾಗಿ ಬಳಸಿಕೊಳ್ಳುವ ಆಸಕ್ತಿ ಮತ್ತು ಮನಸ್ಸನ್ನು ಬೆಳೆಸಿಕೊಳ್ಳಬೇಕು ಎಂದರು.



ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ನಡೆಯಿತು.

ಮೂಲಾಧಾರಗಳಿಲ್ಲದೆ ಇತಿಹಾಸವಿಲ್ಲ, ತಮ್ಮ ಇಲಾಖೆಯಲ್ಲಿ ಇದುವರೆವಿಗೂ ಸಂಗ್ರಹಿಸಿರುವ ಸಾವಿರಾರು ಸಂಖ್ಯೆಯ ಪ್ರಾಥಮಿಕ ಹಾಗೂ ದ್ವಿತೀಯ ಚಾರಿತ್ರಿಕ ಮೂಲಾಧಾರಗಳ ಬಗ್ಗೆ ಮಾಹಿತಿ ನೀಡಿದರು. ಐತಿಹಾಸಿಕ ದಾಖಲೆಗಳು ಈ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕೈಗನ್ನಡಿಯಾಗಿದ್ದು, ಪ್ರಕಟಿತ ಹಾಗೂ ಅಪ್ರಕಟಿತ ದಾಖಲೆಗಳಾದ ಮೈಸೂರು ಆಡಳಿತ ವರದಿಗಳು, ಗೆಜೆಟಿಯರ್ ಗಳು, ಪ್ರೊಸಿಡಿಂಗ್ಸ್ ಗಳು, ವಾರ್ಷಿಕ ವರದಿಗಳು, ಆದೇಶಗಳು, ಸೆನ್ಸಸ್ ವರದಿಗಳು, ಕಡತಗಳು, ಖಾಸಗಿ ದಾಖಲೆಗಳು, ಪತ್ರಿಕೆಗಳು ಹಾಗೂ ಚಾರಿತ್ರಿಕ ಬರವಣಿಗೆಯ ಸಂಪೂರ್ಣ ದಾಖಲೆಗಳನ್ನು ನಮ್ಮ ವಿಭಾಗೀಯ ಪತ್ರಾಗಾರ ಕಚೇರಿಯಲ್ಲಿ ಸಂರಕ್ಷಿಸಿ ಇಡಲಾಗಿದೆ ಎಂದರು.

ಸರ್ಕಾರದ ವಿವಿಧ ಇಲಾಖೆಗಳು ಇಂದಿಗೂ ತಮಗೆ ಅತ್ಯಗತ್ಯವಾದ ಅಪರೂಪದ ದಾಖಲೆಗಳನ್ನು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಹಾಗೂ ವಿಭಾಗೀಯ ಪತ್ರಾಗಾರ ಕಚೇರಿಯಿಂದ ಪಡೆಯುತ್ತಾರೆ. ನೂರಾರು ವರ್ಷಗಳ ಭೂ ದಾಖಲೆ, ಆಡಳಿತ ವರದಿ, ಆದೇಶ, ಜ್ಞಾಪನಾಪತ್ರ, ಸುತ್ತೋಲೆ, ರಾಜಾದೇಶ, ಸಾಮಾನ್ಯ ಪತ್ರಗಳು ಸೇರಿದಂತೆ ನೂರಾರು ವರ್ಷಗಳ ಅತ್ಯಮೂಲ್ಯವಾದ ಅಪ್ರಕಟಿತ ಮಾಹಿತಿಗಳು ಇಲಾಖೆಯಲ್ಲಿ ಲಭ್ಯವಿರುತ್ತವೆ ಎಂದು ಅವರು ತಿಳಿಸಿದರು. ಇಲಾಖೆಯಲ್ಲಿ ಇದುವರೆವಿಗೂ ಡಿಜಿಟಲೀಕರಣ ಮೂಲಕ ಸಂರಕ್ಷಿಸಿರುವ ಮೂಲ ದಾಖಲೆಗಳನ್ನು ಪ್ರಯೋಗಿಕವಾಗಿ ವಿದ್ಯಾರ್ಥಿಗಳಿಗೆ ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಪತ್ರಾಗಾರ ಸಂರಕ್ಷಣೆಯ ಮಹತ್ವ ಮತ್ತು ಉಪಯೋಗಗಳನ್ನು ತಿಳಿಸಿ ಕೊಟ್ಟರು. ಶಾಂತಿ ಮತ್ತು ತಿಳುವಳಿಕೆ ವೇದಿಕೆ ಸಹಯೋಗದಲ್ಲಿ ಹಿರೋಶಿಮಾ ಮತ್ತು ನಾಗಾಸಾಕಿ ದುರಂತದ ಭೀಕರತೆಯನ್ನು ಸಾರುವ ಅಪರೂಪದ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯ ಕುಮಾರಿ, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಪ್ರಾಧ್ಯಾಪಕರಾದ ಎ.ಆರ್. ನಂದೀಶ, ಡಾ. ಎಂ.ಆರ್. ಇಂದ್ರಾಣಿ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಇತಿಹಾಸ ವಿಷಯದ ವಿದ್ಯಾರ್ಥಿಗಳು ಇದ್ದರು.

MYSORE CITY Edition Edition
Aug 30, 2024 Page No. 05
Powered by: erelego.com



Visited to Infosys Campus, Mysuru - 31.08.2024
I & III Year B.A. (HEG & HES) Students











Interactive Session on "Growing Oppotunities in the Dynamic World"
Resource Person: Dr. Seshagiri Rao R.V.
Academic Director, H Cross, Mysuru - 28.8.2024



# ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶಗಳು; ವಿಶೇಷ ಉಪನ್ಯಾಸ



'ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶಗಳು' ಸಂವಾದದಲ್ಲಿ ಸಂಪನ್ಮೂಲ ವ್ಯಕ್ತಿ ಡಾ.ಶೇಷಗಿರಿರಾವ್ ಮಾತನಾಡಿದರು.

ಮೈಸೂರು,ಸೆ.1–ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಭೌತಶಾಸ್ತ್ರ, ಜೀವ ತಂತ್ರಜ್ಞಾನಶಾಸ್ತ್ರ, ಎಂಟ್ರೆ–ಟು–ಸರ್ವೀಸ್, ಐಕ್ಯೂಎಸಿ ಹಾಗೂ H Cross ಸಂಸ್ಥೆ ಸಹಯೋಗದಲ್ಲಿ ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶಗಳು ವಿಷಯ ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಮೈಸೂರಿನ H Cross ಸಂಸ್ಥೆಯ ಶೈಕ್ಷಣಿಕ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿ ಡಾ.ಶೇಷಗಿರಿರಾವ್ ಮಾತನಾಡಿ, ಬಿ.ಎಸ್ಸಿ ಪದವಿಯ ನಂತರ ವಿದ್ಯಾರ್ಥಿಗಳಿಗಿರುವ ವಿಫುಲ ಅವಕಾಶಗಳ ತಿಳಿಸುತ್ತಾ, ಉನ್ನತ ಅಧ್ಯಯನದ ಎಂಎಸ್ಸಿ, ಎಂ.ಎಸ್ ಹಾಗೂ ಇಂಟಿಗ್ರೇಟೆಡ್ ಪಿಹೆಚ್.ಡಿ ಪದವಿ ಸೇರಿದಂತೆ ರಾಜ್ಯ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ವಿಶ್ವವಿದ್ಯಾನಿಲಯಗಳು ನಡೆಸುವ ಪ್ರವೇಶ ಪರೀಕ್ಷೆಗಳಾದ JAM, JEST, CUCET ಪರೀಕ್ಷೆಗಳ ಕಡೆಗೂ ವಿದ್ಯಾರ್ಥಿಗಳು ಗಮನಹರಿಸುವಂತೆ ತಿಳಿಸಿದರು.

ಈ ಪರೀಕ್ಷೆಗಳು ನಡೆಯುವ ಸಂಭವನೀಯ ದಿನಾಂಕಗಳು ಹಾಗೂ ಈ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಹೇಗೆ ಸಿದ್ಧತೆ ನಡೆಸಿಕೊಳ್ಳಬೇಕೆಂಬ ಮಾಹಿತಿ ಹಂಚಿಕೊಂಡರು. ಇದರ ಜೊತೆಗೆ ವಿಸ್ತಾರವಾದ ಉದ್ಯೋಗದ ಅವಕಾಶಗಳನ್ನು ಪಡೆಯಲು ವಿದ್ಯಾರ್ಥಿಗಳು ISRO, DRDO, NRSA, BEL ನಂತಹ ಸುಪ್ರಸಿದ್ಧ ಸಂಸ್ಥೆಗಳನ್ನು ನಡೆಸುವ ಪರೀಕ್ಷೆಗಳಿಗೆ ಹಾಜರಾಗಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. 2000 ಬಹುರಾಷ್ಟ್ರೀಯ ಕಂಪನಿಗಳು ಮತ್ತು ಸ್ಟಾರ್ಟ್ ಅಪ್ ಕಂಪನಿಗಳಿಗೂ ಅರ್ಜಿ ಹಾಕುವಂತೆ ಸೂಚಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಶ್ರೀಧರ ಹೆಚ್, ಭೌತಶಾಸ್ತ್ರ ಮುಖ್ಯಸ್ಥೆ ಡಾ.ಪೂರ್ಣಿಮಾ, ಜೀವ ತಂತ್ರಜ್ಞಾನ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರಿಯಾಂಕ ಶೆಣೈ, ವಿಜ್ಞಾನ ವಿಭಾಗಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿ ಹಾಜರಿದ್ದರು.



## BoS Meeting for the Academic Year - 2024-25 (20.07.2024)





## VoMC in Celebration Mysuru Half Marathon & 10K Event organised by Life is Calling & Thought Focus - 01.09.2024











ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




**ಸಂಚಿಕೆ: 45 ನವೆಂಬರ್ 2024** | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | **www.mahajana.edu.in** | ಸಂಪಾದಕರು: ಡಾ. ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 12



**ಸಂಪಾದಕೀಯ**

## ಮೈಸೂರು ಅರಸರ ಗತವೈಭವ ಸಾರುವ ಖಾಸಗಿ ದರ್ಬಾರ್



ವಿಶ್ವವಿಖ್ಯಾತಿ ಪಡೆದಿರುವ ಮೈಸೂರು ದಸರಾ ಮಹೋತ್ಸವಕ್ಕೆ 415 ವರ್ಷಗಳ ಸಂಭ್ರಮ. ಹದಿನೈದನೇ ಶತಮಾನದಲ್ಲಿ ವಿಜಯನಗರ ರಾಜರ ಕಾಲದಲ್ಲಿ ದಸರೆ ಆರಂಭವಾಯಿತು. ವಿಜಯನಗರ ಸಾಮ್ರಾಜ್ಯ ಪತನಾನಂತರ ಕ್ರಿ.ಶ.1610 ರಲ್ಲಿ ಶ್ರೀರಂಗಪಟ್ಟಣದಲ್ಲಿ ರಾಜ ಒಡೆಯರ್ ಅವರಿಂದ ದಸರಾ ಆಚರಣೆ ಆರಂಭ. ಅಲ್ಲಿಂದ ಇಲ್ಲಿಯವರೆಗೂ ನಡೆದುಕೊಂಡು ಬಂದು ಹೆಮ್ಮೆಯ 'ನಾಡಹಬ' ಎನಿಸಿಕೊಂಡಿದೆ. ದಸರೆಯ ಕೊನೆಯ ದಿನ ನಡೆಯುವ ಜಂಬೂ ಸವಾರಿ, ಪಂಜಿನ ಕವಾಯತು ದೇಶ–ವಿದೇಶಗಳ ಲಕ್ಷಾಂತರ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ.

ಸ್ವಾತಂತ್ರ್ಯ ನಂತರವೂ ರಾಜವಂಶಸ್ಥರಿಂದಲೇ ದಸರಾ ಮಹೋತ್ಸವ ಆಚರಣೆ. ಆದರೆ ರಾಜಧನ ಪದ್ಧತಿ ರದ್ದಾದ ನಂತರ ಎಪ್ಪತ್ತರ ದಶಕದ ಆರಂಭದಲ್ಲಿ ಮೈಸೂರಿನ ಗಣ್ಯ ನಾಗರೀಕರ ಸಮಿತಿ ರಚಿಸಿಕೊಂಡು ದಸರಾ ಆಚರಿಸಿದರು. ಇದಾದ ಬಳಿಕ ರಾಜ್ಯ ಸರ್ಕಾರ ವಹಿಸಿಕೊಂಡು ರಾಜರ ಕಾಲದ ಗತವೈಭವವನ್ನು ಬಿಂಬಿಸುವಂತೆ ಪ್ರತಿ ವರ್ಷ ಅದ್ದೂರಿಯಾಗಿ ದಸರಾ ನಡೆಸಿಕೊಂಡು ಬರುತ್ತಿದೆ.

ಮೈಸೂರು ಇಡೀ ದೇಶದಲ್ಲಿ ಮಾತ್ರವಲ್ಲದೇ ವಿಶ್ವದಲ್ಲಿಯೇ ಅತ್ಯುತ್ತಮ ಪ್ರವಾಸಿ ಕೇಂದ್ರ, ಯೋಜನಾಬದ್ಧ ನಗರಿ. ವಿಜಯನಗರ ಅರಸರ ಕಾಲದಲ್ಲಿ ವೈಭವದಿಂದ ನಡೆಯುತ್ತಿದ್ದ ದಸರಾ ಹಬ್ಬವನ್ನು ಮೈಸೂರಿನ ಯದುವಂಶದ ಅರಸರು ಮುಂದುವರೆಸಿಕೊಂಡು ಬಂದು 'ನಾಡಹಬ್ಬ'ವಾಗಿಸಿದರು.

ದಸರಾ ಮಹೋತ್ಸವವು ಚಾಮುಂಡಿ ಬೆಟ್ಟದಲ್ಲಿ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರ ಪೂಜೆಯೊಂದಿಗೆ ಆರಂಭವಾಗುತ್ತದೆ. ಶ್ರೀ ಚಾಮುಂಡೇಶ್ವರಿ ದೇವಿಯೂ ಮೈಸೂರು ರಾಜವಂಶಸ್ಥರ ಕುಲದೇವತೆ ಹೌದು. 'ನವರಾತ್ರಿ' ಹಬ್ಬವು ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸಿ, ರಾಜರ ಕಾಲದ ಗತವೈಭವವನ್ನು ನೆನಪಿಸುವುದರ ಜೊತೆಗೆ ಭಾವೈಕ್ಯತೆಯನ್ನು ಬೆಸೆಯುವ ಸಂಕೇತವಾಗಿಯೂ ಎಲ್ಲಾ ವರ್ಗದ ಜನರನ್ನು ತನ್ನತ್ತ ಸೆಳೆಯುತ್ತದೆ.

ಮೈಸೂರು ರಾಜ್ಯವನ್ನು ಆಳಿದ ಯದುವಂಶದ ರಾಜ ಮಹಾರಾಜರು ದಸರಾ ದರ್ಬಾರ್ ನಡೆಸುವ ಮೂಲಕ ಮೈಸೂರು ದಸರಾ ಮಹೋತ್ಸವವನ್ನು ವಿಶ್ವವಿಖ್ಯಾತಿಗೊಳಿಸಿದ್ದರು.

ರಾಜರ ಆಳ್ವಿಕೆ ಮುಗಿದು ಪ್ರಜಾಪ್ರಭುತ್ವ ಆಳ್ವಿಕೆ ಬಂದ ನಂತರವೂ ದಸರಾ ಸಂದರ್ಭದಲ್ಲಿ ಮೈಸೂರು ಅರಮನೆಯಲ್ಲಿ ರಾಜವಂಶಸ್ಥರು ಖಾಸಗಿ ದರ್ಬಾರ್ ನಡೆಸಿಕೊಂಡು ಬಂದಿದ್ದು, ಇಂದಿಗೂ ಖಾಸಗಿ ದರ್ಬಾರ್ ರಾಜ ಮಹಾರಾಜರ ಕಾಲದ ಗತವೈಭವವನ್ನು ಸಾರುತ್ತಿದೆ.

ರಾಜವಂಶಸ್ಥರ ಖಾಸಗಿ ದರ್ಬಾರ್ ಸಾಂಪ್ರದಾಯಿಕ ವಿಧಿ ವಿಧಾನಗಳೊಂದಿಗೆ ಮೈಸೂರು ಅರಮನೆಯಲ್ಲಿ ಆರಂಭವಾಗಿದ್ದು, ವಿಜಯದಶಮಿ ಜಂಬೂಸವಾರಿ ದಿನದವರೆಗೂ ನಡೆಯುತ್ತದೆ.

ವಿಶ್ವವಿಖ್ಯಾತಿ ಗಳಿಸಿರುವ ಮೈಸೂರು ಅರಮನೆಯ ಒಳಗಿನ ದರ್ಬಾರ್ ಹಾಲ್‌ನಲ್ಲಿ ನವರಾತ್ರಿ ವೇಳೆ ನಡೆಯುವ ದಸರಾ ಖಾಸಗಿ ದರ್ಬಾರ್ ರಾಜಪರಂಪರೆಯನ್ನು ಕಣ್ಮುಂದೆ ತರುತ್ತದೆ. ರೇಷ್ಮೆ ಝರಿ ಪೇಟ, ಶೆಲ್ಯಾ, ತುರಾಯಿ ಮುಂತಾದ ರಾಜಪೋಷಾಕಿನಲ್ಲಿ ಕಂಗೊಳಿಸುವ ಯದುವಂಶದ ಕುಡಿಯು

**ಪು.ತಿ.ನೋ.**

ಪಟ್ಟದ ಕತ್ತಿಯೊಂದಿಗೆ ರತ್ನಖಚಿತ ಚಿನ್ನದ ಸಿಂಹಾಸನ ಏರುವುದೇ ವೈಭೋಗ.

ಯದುವಂಶಕ್ಕೆ ಪ್ರತ್ಯೇಕ ಪಂಚಾಂಗವಿದೆ, ಅವರದೇ ಆದ ಸಂಪ್ರದಾಯವಿದೆ. ಅದನ್ನು ಮೀರಿ ನಡೆಯುವಂತಿಲ್ಲ. ಅದೇ ನಿಯಮದಂತೆ ಈ ಬಾರಿಯೂ ಸಾಂಪ್ರದಾಯಿಕವಾಗಿ ದಸರಾ ಖಾಸಗಿ ದರ್ಬಾರ್ ನಡೆಯಲಿದೆ.

**ಸತತ 10ನೇ ಬಾರಿ ಯದುವೀರ್ ದರ್ಬಾರ್**

ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಂಪ್ರದಾಯದಂತೆ 10ನೇ ಬಾರಿಗೆ ರತ್ನಖಚಿತ ಸಿಂಹಾಸನಾರೋಹಣ ಮಾಡುವ ಮೂಲಕ ರಾಜಪೋಷಾಕಿನಲ್ಲಿ ದಸರಾ ಖಾಸಗಿ ದರ್ಬಾರ್ ನಡೆಸಲು ಸಿದ್ಧರಾಗಿದ್ದಾರೆ.

ಇಷ್ಟು ವರ್ಷ ರಾಜವಂಶಸ್ಥರು ಮಾತ್ರವಾಗಿದ್ದ ಯದುವೀರ್ ಅವರು ಈ ಬಾರಿ ಮೈಸೂರು – ಕೊಡಗು ಲೋಕಸಭಾ ಕ್ಷೇತ್ರದ ಸಂಸದರಾಗಿದ್ದು, ಖಾಸಗಿ ದರ್ಬಾರ್‌ಗೆ ಮತ್ತಷ್ಟು ಮೆರಗು ಹೆಚ್ಚುತ್ತದೆ.

ದಸರಾ ಮೊದಲ ದಿನ ಎಣ್ಣೆಮಜ್ಜನ ಮುಗಿಸಿ ಬಂದ ಯದುವೀರ್ ಅವರಿಗೆ ಪತ್ನಿ ತ್ರಿಷಿಕಾ ಕುಮಾರಿ ಪಾದಪೂಜೆ ನೆರವೇರಿಸುವರು. ನಂತರ ರಾಜವಂಶಸ್ಥರ ಸಂಪ್ರದಾಯದಂತೆ ದರ್ಬಾರ್ ಹಾಲ್‌ಗೆ ಯದುವೀರ್ ಆಗಮಿಸಿ, ರತ್ನಖಚಿತ ಸಿಂಹಾಸನಕ್ಕೆ ಪೂಜೆ ಸಲ್ಲಿಸಿ, ಸಿಂಹಾಸನ ಅಲಂಕರಿಸುತ್ತಿದ್ದಂತೆಯೆ ಬಹುಪರಾಕ್ ಮೊಳಗುತ್ತದೆ.

ಖಾಸಗಿ ದರ್ಬಾರ್ ಅಂಗವಾಗಿ ಕಾಡಿನಿಂದ ಆಗಮಿಸಿದ ಭೀಮ ಮತ್ತು ಕಂಜನ್ ಆನೆಗಳು ಅರಮನೆ ಖಾಸಗಿ ದರ್ಬಾರ್‌ನಲ್ಲಿ ಪಟ್ಟಣ ಮತ್ತು ನಿಶಾನೆ ಆನೆಗಳಾಗಿ ಭಾಗವಹಿಸಿವೆ. ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸುಗಳು ಸಹ ವಿವಿಧ ಪೂಜಾ ಕೈಂಕರ್ಯಗಳಲ್ಲಿ ಪಾಲ್ಗೊಳ್ಳುತ್ತವೆ.

ದಸರಾ ಅಂಗವಾಗಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪ್ರತಿದಿನ ಸಂಜೆ ರಾಜ ಪೋಷಾಕಿನಲ್ಲಿ ಸಿಂಹಾಸನರೂಢರಾಗಿ ಖಾಸಗಿ ದರ್ಬಾರ್ ನಡೆಸಲಿದ್ದು, ಇದೇ ವೇಳೆ ವಿವಿಧ ಸಾಂಪ್ರದಾಯಿಕ ಸರಸ್ವತಿ ಪೂಜೆ, ಆಯುಧ ಪೂಜೆ ಸೇರಿದಂತೆ ವಿವಿಧ ಪೂಜೆ ಪುನಸ್ಕಾರಗಳು ನಡೆಯಲಿವೆ.

ಆಯುಧ ಪೂಜೆ ದಿನದಂದು ಶಮಿ ವೃಕ್ಷಕ್ಕೆ ಪೂಜೆ, ಅರಮನೆಯ ಕತ್ತಿ ಸೇರಿದಂತೆ ವಿವಿಧ ಆಯುಧಗಳಿಗೆ ಯದುವೀರ್ ಆವರು ಪೂಜೆ ಸಲ್ಲಿಸುತ್ತಾರೆ. ವಿಜಯದಶಮಿಯಂದು ಬೆಳ್ಳಿ ರಥದಲ್ಲಿ ಅರಮನೆ ಆವರಣದಲ್ಲಿ ಮೆರವಣಿಗೆ, ಅರಮನೆ ಕೋಟೆ ಆವರಣದಲ್ಲಿರುವ ವಿವಿಧ ದೇವಸ್ಥಾನಗಳಿಗೆ ತೆರಳಿ ಪೂಜೆ ಸಲ್ಲಿಸುತ್ತಾರೆ.

ವಿಜಯದಶಮಿಯಂದು ವಿಜಯದ ಸಂಕೇತವಾಗಿ ಮರದ ಮಹಿಷನನ್ನು ಸಿದ್ದಪಡಿಸಿ ಕುಂಕುಮ ನೀರು ಬೆರೆಸಿದ ದ್ರವ ಬಳಿದು ದುರ್ಗಾಪೂಜೆ ಬಳಿಕ ಬಲಿ ಕೊಡಲಾಗುತ್ತದೆ. ಇದನ್ನು ಮಹಿಷಾಸುರನ ಸಂಹಾರ ಎಂದು ನಂಬಲಾಗುತ್ತದೆ. ಇದಾದ ನಂತರವಷ್ಟೇ ಮೈಸೂರು ಅರಮನೆ ಆವರಣದಲ್ಲಿ ಸರ್ಕಾರಿ ದಸರಾ ಮಹೋತ್ಸವದ ವಿಜಯದಶಮಿಯ ಜಂಬೂ ಸವಾರಿಗೆ ಚಾಲನೆ ದೊರೆಯುತ್ತದೆ.

**ವಜ್ರಮುಷ್ಠಿ ಕಾಳಗ**

ಮೈಸೂರಿನ ಅರಸರು ವಿಜಯದಶಮಿಯ ದಿನದಂದು ವಜ್ರಮುಷ್ಠಿ ಕಾಳಗ ನಡೆಸುತ್ತಿದ್ದರು. ಹಳೇ ಮೈಸೂರು ಭಾಗದಲ್ಲಿ ನೆಲೆಸಿರುವ ಜೆಟ್ಟಿ ಜನಾಂಗದವರು ಈ ಸಾಹಸ ಕ್ರೀಡೆಯಲ್ಲಿ ಸಿದ್ಧಹಸ್ತರಾಗಿದ್ದು, ಪ್ರತಿವರ್ಷದ ವಿಜಯದಶಮಿಯಂದು ಅರಮನೆಯ ಕಲ್ಯಾಣ ಮಂಟಪದ ಮುಂಭಾಗವಿರುವ ಕರಿಕಲ್ಲು ತೊಟ್ಟಿಯ ಮೆಟ್ಟಿಲ ಹತ್ತಿರ ಕಾಳಗ ನಡೆಸುತ್ತ ರಾಜವಂಶಸ್ಥರ ಮುಂದೆ ತಮ್ಮ ಕಲೆ ಪ್ರದರ್ಶಿಸುವ ಖ್ಯಾತಿಯುಳ್ಳವರಾಗಿದ್ದಾರೆ.

ಬೋಳಿಸಿದ ತಲೆಯೊಂದಿಗೆ ಲಂಗೋಟಿ ಧರಿಸಿ, ಹಣೆಗೆ ಮೂರು ಹನುಮ ನಾಮ ಹಾಕಿ, ಬಲ ಕೈಗೆ ಆಯುಧ ಸುತ್ತಿಕೊಂಡು ಕಣಕ್ಕಿಳಿಯುವ ಈ ಕುಸ್ತಿಪಟುಗಳು ಅಕ್ಷರಶಃ ರಕ್ತ ಚಿಮ್ಮುವ ತನಕ ಕಾಳಗ ನಡೆಸುತ್ತಾರೆ. ಒಬ್ಬರಿಗೊಬ್ಬರು ಪರಿಚಿತರಾಗಿದ್ದರೂ ಅಖಾಡದಲ್ಲಿ ಮಾತ್ರ ಖಡಕ್ ವೈರಿಗಳಂತೆ ಕಾದಾಡುತ್ತಾರೆ.

ಈ ಹಿಂದೆ ರಕ್ತ ಚಿಮ್ಮಿದರು ಪ್ರತಿಸ್ಪರ್ಧಿ ಸೋಲುವ ತನಕ ಕಾಳಗ ನಡೆಸಲಾಗುತ್ತಿತ್ತು. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಕೇವಲ ರಕ್ತ ಕಾಣಿಸಿಕೊಂಡ ತಕ್ಷಣ ಕಾಳಗ ನಿಲ್ಲಿಸುವಂತೆ ಸೂಚಿಸಿದ್ದರಿಂದ ಸಾಂಕೇತಿಕವಾಗಿ ವಜ್ರಮುಷ್ಠಿ ಕಾಳಗ ನಡೆಸಿಕೊಂಡು ಬರಲಾಗುತ್ತಿದೆ.

**ಖಾಸಗಿ ದರ್ಬಾರ್ ಸಂಪ್ರದಾಯ**

ಈ ಹಿಂದೆ ಏಳು ಬಾರಿ ರಾಜನೇ ಇಲ್ಲದೇ ದಸರಾ ಆಚರಿಸಲಾಗಿದೆ. ನಾಲ್ಕು ಬಾರಿ ಖಾಸಗಿ ದರ್ಬಾರ್ ವೇಳೆ ಸಿಂಹಾಸನದಲ್ಲಿ ಪಟ್ಟದ ಕತ್ತಿಯನ್ನಿರಿಸಿ ಪೂಜಿಸಲಾಗುತ್ತದೆ. ಉಳಿದ ಮೂರು ಬಾರಿ ಗೃಹ ಪೂಜೆಗಷ್ಟೇ ನವರಾತ್ರಿ ಸೀಮಿತವಾಗಿತ್ತು. ಪಟ್ಟಾಭಿಷಿಕ್ತ ರಾಜನಿಲ್ಲದ ದಸರಾ ನಡೆದಿದೆ. ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ನಿಧನರಾದ ಬಳಿಕ ಪಟ್ಟದ ಕತ್ತಿಯನ್ನೇ ರಾಜನ ಸ್ಥಾನದಲ್ಲಿ ಇರಿಸಿ ದರ್ಬಾರ್ ನಡೆಸಲಾಗಿತ್ತು. ಕಳೆದ 9 ವರ್ಷಗಳಿಂದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಖಾಸಗಿ ದರ್ಬಾರ್ ಅನ್ನು ಸಂಪ್ರದಾಯದಂತೆ ನಡೆಸುತ್ತಿದ್ದು, ಈಗ 10ನೇ ಬಾರಿಗೆ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ಸಂಕಷ್ಟದ ವೇಳೆ ಸರಳವಾಗಿ ಮತ್ತು ಸಂಪ್ರದಾಯಬದ್ಧವಾಗಿ ದಸರಾ ನಡೆಸಲಾಗಿದೆ. ಅದೇ ರೀತಿ 2020–2021ನೇ ಸಾಲಿನಲ್ಲಿ ಕೋವಿಡ್ ಕಾರಣಕ್ಕಾಗಿ ಸರಳ ಹಾಗೂ ಸಾಂಪ್ರದಾಯಿಕ ಖಾಸಗಿ ದರ್ಬಾರ್ ನಡೆಸಲಾಗಿತ್ತು. ಈ ವೇಳೆ ರಾಜವಂಶಸ್ಥರು ಹಾಗೂ ಅರಮನೆ ಸಿಬ್ಬಂದಿ ಹೊರತುಪಡಿಸಿ ಬೇರೆ ಯಾರಿಗೂ ಪ್ರವೇಶ ನೀಡಿರಲಿಲ್ಲ. ಅದೇ ರೀತಿ ಖಾಸಗಿ ದರ್ಬಾರ್‌ನಲ್ಲಿ ರಾಜವಂಶಸ್ಥರು, ಕುಟುಂಬ ಸದಸ್ಯರು, ಅರಮನೆ ಸಿಬ್ಬಂದಿ ಹಾಗೂ ರಾಜವಂಶಸ್ಥರಿಂದ ಪಾಸ್ ಪಡೆದವರಿಗೆ ಮಾತ್ರ ಅವಕಾಶ ಕಲ್ಪಿಸಲಾಗುತ್ತದೆ.

**– ಡಾ. ಶ್ರೀಧರ ಹೆಚ್**
ಶೈಕ್ಷಣಿಕ ಡೀನ್
ಹಾಗೂ
ಮುಖ್ಯಸ್ಥರು, ಇತಿಹಾಸ ವಿಭಾಗ



# ಕರ್ನಾಟಕದ ಸ್ವತಂತ್ರ್ಯ ಚಳುವಳಿಯ ಮಹಿಳಾ ಹೋರಾಟಗಾರ್ತಿಯರು

**ಬಳ್ಳಾರಿ ಸಿದ್ದಮ್ಮ (1903–1982)**

ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಧುಂಡಸಿ ಗ್ರಾಮದಲ್ಲಿ ಜನಿಸಿದ ಸಿದ್ಧಮ್ಮನವರು ಬಳ್ಳಾರಿಯ ಮುರಿಗೆಪ್ಪನವರನ್ನು ಮದುವೆಯಾಗಿ ಬಳ್ಳಾರಿ ಸಿದ್ದಮ್ಮ ಆದರು. ಗಾಂಧೀಜಿ ಅವರಿಂದ ಅತ್ಯಂತ ಪ್ರಭಾವಿತರಾಗಿದ್ದ ಸಿದ್ದಮ್ಮ ಗಾಂಧೀಜಿ ಅವರನ್ನು ನೋಡಿ ಮಾತನಾಡಿಸಲು ವಾರ್ಧಾದ ಆಶ್ರಮಕ್ಕೇ ಹೋಗಿದ್ದರು. ಅಲ್ಲಿ ಅವರೊಡನೆ ಮಾತನಾಡಿ ಅವರ ಕೆಲಸಗಳನ್ನು ನೋಡಿ ಅವನ್ನು ಅಳವಡಿಸಿಕೊಳ್ಳಬೇಕೆಂಬ ಅದಮ್ಯ ಇಚ್ಛೆಯಿಂದ ಮರಳಿದರು. ಸ್ವಾತಂತ್ರ್ಯ ಹೋರಾಟದ ಕಾವು ಇವರನ್ನು ತಟ್ಟಲು ಹೆಚ್ಚು ಸಮಯ ಬೇಕಾಗಲಿಲ್ಲ. ದಾವಣಗೆರೆ, ಚಿತ್ರದುರ್ಗದ ಕಡೆ ಹಳ್ಳಿ–ಹಳ್ಳಿಗೂ ಹೋಗಿ ಜನರಲ್ಲಿ ಪ್ರೇರಣೆ ತುಂಬಿದರು. ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ವಂದೇ ಮಾತರಂ ಹಾಡಿದ್ದಲ್ಲದೇ, ಧ್ವಜಾರೋಹಣಕ್ಕೂ ಜೊತೆಗೂಡಿದ್ದರಿಂದ ಪೊಲೀಸರಿಂದ ಬಂಧಿತರಾದರು. ನಿಮಗೆ ಗೊತ್ತೇ? ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಬಂಧಿತರಾದ ಮೊಟ್ಟಮೊದಲ ಮಹಿಳೆ ಬಳ್ಳಾರಿ ಸಿದ್ದಮ್ಮ! ನಂತರ ವಿದುರಾಶ್ವತ್ಥದಲ್ಲಿಯೂ ಧ್ವಜಾರೋಹಣಕ್ಕೆ ಸಿದ್ದಮ್ಮನವರು ಹಾಜರಿದ್ದರು! ಖಾದಿ ಪ್ರಚಾರ, ಮದ್ಯಪಾನ ನಿಷೇಧ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದ ಸಿದ್ಧಮ್ಮನವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ ಸಕ್ರಿಯರಾಗಿದ್ದರು. ಸ್ವಾತಂತ್ಯಾ ನಂತರ ಸಮಾಜ ಸೇವೆಯಲ್ಲಿ ತೊಡಗಿದ್ದ ಸಿದ್ದಮ್ಮನವರಿಗೆ ಭಾರತ ಸರ್ಕಾರ ತಾಮ್ರಪತ್ರ ನೀಡಿ ಗೌರವಿಸಿದೆ.

**ಯಶೋಧರಾ ದಾಸಪ್ಪ (1905–1980)**

ಬೆಂಗಳೂರಿನಲ್ಲಿ ಜನಿಸಿದ ಯಶೋಧರಾ ಅವರು ಬಳ್ಳಾರಿ ಸಿದ್ಧಮ್ಮನವರ ಸಮಕಾಲೀನರು. ಶ್ರೀಮಂತ ಕುಟುಂಬಕ್ಕೆ ಸೇರಿದವರಾದರೂ, ತಾರುಣ್ಯದಲ್ಲಿಯೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದವರು. ಶಿವಪುರದ ಧ್ವಜ ಸತ್ಯಾಗ್ರಹ, ವಿದುರಾಶ್ವತ್ಥದ ಹತ್ಯಾಕಾಂಡಕ್ಕೆ ಸಾಕ್ಷಿಯಾಗಿದ್ದವರು. ಹೋರಾಟದಲ್ಲಿ ತೊಡಗಿದ್ದಕ್ಕೆ ಜೈಲಿಗೂ ತಳ್ಳಲ್ಪಟ್ಟಿದ್ದರು. ಹಲವಾರು ಸತ್ಯಾಗ್ರಹಗಳಲ್ಲಿ ಭಾಗವಹಿಸಿದ್ದ ಯಶೋಧರಾ ಅವರು, ಮೈಸೂರಿನ ಟೌನ್ ಪೊಲೀಸ್ ಸ್ಟೇಷನ್‌ಗೆ ಹ್ಯಾಮಿಲ್ಟನ್ ಎಂಬ ಕ್ರೂರ ಬ್ರಿಟಿಷ ಅಧಿಕಾರಿಯ ಹೆಸರು ಇಡಲು ಬ್ರಿಟಿಷ್ ಸರ್ಕಾರ ಮುಂದಾದಾಗ ಉಗ್ರವಾಗಿ ವಿರೋಧಿಸಿ ಸರ್ಕಾರ ನಿರ್ಧಾರ ಬದಲಿಸುವಂತೆ ಮಾಡಿದವರು. ಸ್ವತಂತ್ರ್ಯಾ ನಂತರ ರಾಜಕಾರಣಿಯಾಗಿ, ಸಚಿವೆಯಾಗಿ, ಸಮಾಜ ಸೇವಕಿಯಾಗಿ ಸೇವೆ ಸಲ್ಲಿಸಿದ ಯಶೋಧರಾ ದಾಸಪ್ಪನವರಿಗೆ ಪದ್ಮಭೂಷಣ ಪುರಸ್ಕಾರ ಲಭಿಸಿದೆ. ಅವರ ಸೇವೆಯ ಪ್ರತೀಕವೆಂಬಂತೆ ಗಾಂಧೀಜಿಯವರ ಚಿತಾಭಸ್ಮ ಮತ್ತು ಸ್ಮಾರಕ ಇರುವ 'ಕಸ್ತೂರಬಾ ಬಾಲಿಕಾ ಆಶ್ರಮ' ಅರಸೀಕೆರೆಯಲ್ಲಿ ಇಂದಿಗೂ ಕಾರ್ಯನಿರ್ವಹಿಸುತ್ತಿದೆ.

**ಉಮಾಬಾಯಿ ಕುಂದಾಪುರ (1892–1992)**

ತಿಲಕರ ಅಂತಿಮಯಾತ್ರೆಯನ್ನು ನೋಡಿ ಪ್ರಭಾವಿತರಾಗಿ ಸ್ವಾತಂತ್ರ್ಯ ಹೋರಾಟಕ್ಕಿಳಿದ ಉಮಾಬಾಯಿ ಅವರು ಅಂದಿನ ರಿವಾಜಿನಂತೆ ಬಾಲ್ಯವಿವಾಹವಾಗಿ ಬಾಂಬೆಯಲ್ಲಿ ವಾಸವಿದ್ದರು. ತಮ್ಮ ಮಾವನವರ ಬೆಂಬಲದಿಂದ ತಮ್ಮ 27ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದ ಉಮಾಬಾಯಿ ಅವರು ತಮ್ಮ ಪತಿ ಕ್ಷಯದಿಂದ ತೀರಿಕೊಂಡಾಗ ಮಾವನವರೊಂದಿಗೆ ಹುಬ್ಬಳ್ಳಿ ಸೇರಿದರು. ಅಲ್ಲಿ ನ.ಸು.ಹರ್ಡೀಕರ್ ಅವರ ಮಾರ್ಗದರ್ಶನದಲ್ಲಿ ಹೋರಾಟಕ್ಕೆ ಧುಮುಕಿದರು. ಅವರ ಮನೆ, ಅವರ ಮಾವನವರ ಕರ್ನಾಟಕ ಪ್ರೆಸ್ ಸ್ವಾತಂತ್ರ್ಯ ವೀರರಿಗೆ ಆಶ್ರಯ ತಾಣವಾಯಿತು. ತಮ್ಮ ಹೋರಾಟಗಳಿಗಾಗಿ ಯುರವಾಡ ಜೈಲು ಸೇರುವಂತಾದರೂ, ಅವರ ಹೋರಾಟದ ಕೆಚ್ಚು ಕಡಿಮೆಯಾಗಲಿಲ್ಲ. ಬಹುತೇಕ ಎಲ್ಲಾ ಚಳುವಳಿಗಳಲ್ಲೂ ಭಾಗವಹಿಸಿದ ಉಮಾಬಾಯಿ, ಮುಖ್ಯವಾಗಿ ತನ್ನಂತಹ ವಿಧವೆಯರನ್ನು ಹೋರಾಟಕ್ಕೆ ಧುಮುಕುವಂತೆ ಹುರಿದುಂಬಿಸಿದರು. ಸ್ವಾತಂತ್ರ್ಯಾ ನಂತರ ಸರ್ಕಾರದ ಯಾವುದೇ ಬಿರುದುಬಾವಲಿ ಸನ್ಮಾನ ಮಾಸಾಶನಗಳನ್ನು ಸ್ವೀಕರಿಸದ ಉಮಾಬಾಯಿ ಸಮಾಜ ಸೇವಕಿಯಾಗಿ, ತಳಮಟ್ಟದ ಕಾರ್ಯಕರ್ತೆಯಾಗಿಯೇ ದುಡಿದು ತಮ್ಮ ನೂರನೇ ವಯಸ್ಸಿನಲ್ಲಿ ನಿಧನರಾದರು.

**ನಾಗಮ್ಮ ಪಾಟೀಲ್ (1905–2002)**

ಸ್ವಾತಂತ್ರ್ಯ ಹೋರಾಟಗಾರ ಸರ್ದಾರ್ ವೀರಗೌಡ ಪಾಟೀಲರ ಧರ್ಮಪತ್ನಿ ನಾಗಮ್ಮನವರು ಪತಿಯ ಆಶಯಗಳಿಗೆ ನೆರಳಾಗಿ ನಿಂತವರು ಮಾತ್ರವಲ್ಲ, ಅಪ್ಪಟ ಗಾಂಧೀ ಅನುಯಾಯಿಯಾಗಿದ್ದ ಅವರು, ಸ್ವಾತಂತ್ರ್ಯ ಹೋರಾಟದೊಂದಿಗೆ, ಗಾಂಧೀಜಿ ಅವರು ಪ್ರತಿಪಾದಿಸುತ್ತಿದ್ದ ಹರಿಜನೋದ್ಧಾರದಲ್ಲಿ ಅಪಾರ ನಂಬಿಕೆಯಿಟ್ಟವರು. ಹರಿಜನ ಬಾಲಿಕಾ ಆಶ್ರಮ ಸ್ಥಾಪಿಸಿ, ಊರೂರು ತಿರುಗಿ ನೆರವಿನ ಅವಶ್ಯಕತೆಯಿದ್ದ ಹರಿಜನ ಬಾಲಕಿಯರನ್ನು ಆಶ್ರಮಕ್ಕೆ ಕರೆತಂದು ಅವರ ಜೀವನಕ್ಕೆ ಗಟ್ಟಿ ಬುನಾದಿ ಹಾಕಿಕೊಟ್ಟರು. ಅಲ್ಲದೇ ಅಬಲ ಮಹಿಳೆಯರಿಗಾಗಿ ಸಾಕಷ್ಟು ಕೆಲಸ ಮಾಡಿದರು. ವಿನೋಬಾ ಭಾವೆ ಅವರ ಭೂದಾನ ಚಳುವಳಿಗೆ ಸೇರಿದ ಈ ಪ್ರಾಂತ್ಯದ ಮೊದಲಿಗರು. ರಾಣೇಬೆನ್ನೂರು ಕ್ಷೇತ್ರದಿಂದ ಬಾಂಬೆ ಪ್ರೆಸಿಡೆನ್ಸಿಗೆ ಆಯ್ಕೆಯಾಗಿದ್ದರು.

**– ಕು. ಅಂಕಿತ ಆರ್**
ದ್ವಿತೀಯ ಬಿ.ಎ.



## ಕನ್ನಡದ ಮೊಟ್ಟ ಮೊದಲ ರಾಜವಂಶ

ಕನ್ನಡನಾಡು ಕಲೆಗಳ ಬೀಡು ಎನ್ನುವ ನಮ್ಮ ಕರ್ನಾಟಕದಲ್ಲಿ ಹಲವು ಮನೆತನಗಳು ಆಳ್ವಿಕೆ ನಡೆಸಿ ತಮ್ಮದೇ ಆದ ವಿವಿಧ ಕೊಡುಗೆಗಳನ್ನು ನೀಡಿವೆ. ಅಂತಹ ಮನೆತನಗಳಲ್ಲಿ ಮೊದಲ ರಾಜವಂಶವೆಂದರೆ 'ಕದಂಬ ಮನೆತನ'ವಾಗಿದೆ.

ಕದಂಬರು ಕ್ರಿ.ಶ.345 ರಿಂದ 540ರವರೆಗೆ ಇಂದಿನ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಿಂದ ಆಳುತ್ತಿದ್ದ ಕರ್ನಾಟಕದ ಒಂದು ಪುರಾತನ ರಾಜವಂಶ. ಮುಂದೆ ಚಾಲುಕ್ಯ ಮತ್ತು ರಾಷ್ಟ್ರಕೂಟ ಸಾಮ್ರಾಜ್ಯಗಳ ಸಾಮಂತರಾಗಿ ಆಳ್ವಿಕೆ ಮುಂದುವರೆಸಿದ ಕದಂಬರ ರಾಜ್ಯ ಗೋವಾ ಮತ್ತು ಹಾನಗಲ್‌ಗಳಲ್ಲಿ ಶಾಖೆಗಳನ್ನು ಹೊಂದಿತ್ತು.

ಕನ್ನಡವನ್ನು ರಾಜ್ಯ ಭಾಷೆಯಾಗಿ ಬಳಸಿದ ಪ್ರಪ್ರಥಮ ರಾಜವಂಶ ಕದಂಬರು. ಈ ಪ್ರದೇಶದ ಬೆಳವಣಿಗೆಯ ಅಧ್ಯಯನದಲ್ಲಿ ಬಹಳ ಕಾಲ ಬಾಳಿದ ಸ್ಥಳೀಯ ರಾಜಕೀಯ ಶಕ್ತಿಯಾಗಿ ಮತ್ತು ಕನ್ನಡ ಒಂದು ಪ್ರಮುಖ ಪ್ರಾದೇಶಿಕ ಭಾಷೆಯಾಗಿ ಬೆಳೆದ ಕಾಲಮಾನ ಇದಾಗಿದೆ. ಇದು ಕರ್ನಾಟಕದ ಇತಿಹಾಸದಲ್ಲಿ ಸರಿ ಸುಮಾರು ಐತಿಹಾಸಿಕ ಪ್ರಾರಂಭದ ಕಾಲವಾಗಿದೆ.

ಕ್ರಿ.ಶ.345 ರಲ್ಲಿ ಮಯೂರವರ್ಮನಿಂದ ಸ್ಥಾಪಿಸಲ್ಪಟ್ಟ ಈ ರಾಜ್ಯವು ಬೃಹತ್ ಸಾಮ್ರಾಜ್ಯವಾಗಿ ಬೆಳೆಯುವ ಲಕ್ಷಣವು ಆಗಾಗ ಗೋಚರಿಸುತ್ತಿತ್ತು. ಆಗಿನ ರಾಜರು ಹೊಂದಿದ ಬಿರುದು ಬಾವಲಿಗಳು ಈ ವಿಷಯಕ್ಕೆ ಪುಷ್ಟಿಯನ್ನು ನೀಡುತ್ತವೆ.

ಈ ವಂಶದ ಕಾಕುಸ್ಥವರ್ಮನೊಂದಿಗೆ ವಿವಾಹ ಸಂಬಂಧವನ್ನು ಗುಪ್ತರ ದೊರೆಗಳು ಏರ್ಪಡಿಸಿಕೊಂಡಿದ್ದುದು, ಈ ರಾಜ್ಯದ ಘನತೆ ಎಂತಹದು ಎಂಬುದನ್ನು ಸೂಚಿಸುತ್ತದೆ.

ತಾಳಗುಂದದ ಶಾಸನದ ಪ್ರಕಾರ ಕದಂಬರು ಮೂಲತಃ ಅವರು ಆದಿವಾಸಿ ಜನಾಂಗಕ್ಕೆ ಸೇರಿದವರಾಗಿದ್ದರು ಎಂಬ ಅಭಿಪ್ರಾಯವೂ ಇದೆ.

ಕದಂಬರು ಇಂದಿನ ಕೇರಳ, ತಮಿಳುನಾಡು ಪ್ರದೇಶದಲ್ಲಿ ರಾಜ್ಯವಾಳುತ್ತಿದ್ದ ಚೇರ ರಾಜರೊಂದಿಗೆ ಸಂಘರ್ಷದಲ್ಲಿದ್ದ ಕಡಂಬು ಎಂಬ ಬುಡಕಟ್ಟಿಗೆ ಸೇರಿದವರು ಎಂಬ ಅಭಿಪ್ರಾಯವನ್ನು ಮಂಡಿಸಲಾಗಿದೆ. ಸುಬ್ರಹ್ಮಣ್ಯ ಮತ್ತು ಕದಂಬ ವೃಕ್ಷವನ್ನು ಮನೆದೇವರಾಗಿ ಪೂಜಿಸುವವರಾಗಿ ಕಡಂಬುಗಳ ಉಲ್ಲೇಖ ತಮಿಳಿನ ಸಂಗಮ ಸಾಹಿತ್ಯದಲ್ಲಿ ದೊರಕುತ್ತದೆ.

ಆದರೂ ಸಹ ಸ್ಥಳೀಯ ಕನ್ನಡಿಗರಾಗಿದ್ದ ಕದಂಬರು ತಮ್ಮ ರಾಜ್ಯದ ಆಡಳಿತ ಮತ್ತು ರಾಜಕೀಯದಲ್ಲಿ ಕನ್ನಡಕ್ಕೆ ಪ್ರಧಾನ ಸ್ಥಾನ ಕೊಟ್ಟರು. ಇದನ್ನು ಗಮನಿಸಿದರೆ ಕದಂಬರು ಬ್ರಾಹ್ಮಣ ಕಾಲಕ್ಕೆ ಬರಮಾಡಿಕೊಂಡ ಕನ್ನಡ ಭಾಷಿಕರಾಗಿದ್ದರು ಎಂದು ಸಿದ್ಧವಾಗುತ್ತದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ರಾಜಾ ಕೃಷ್ಣವರ್ಮನ ಆರಂಭದ ಶಾಸನಗಳಲ್ಲಿ ಕಂಡುಬರುವ ಕದಂಬರು ನಾಗರ ಪೀಳಿಗೆಯವರು ಎಂಬ ಉಲ್ಲೇಖ ಕೂಡ ಕದಂಬರು ಕನ್ನಡದವರಾಗಿದ್ದರು ಎಂದು ಖಚಿತಪಡಿಸುತ್ತದೆ.

ಕನ್ನಡದಲ್ಲಿ ದೊರಕಿರುವ ಮೊಟ್ಟಮೊದಲ ಶಾಸನವೆಂದು ಹೆಸರಾಗಿರುವ ಹಲ್ಮಿಡಿ ಶಾಸನ ಕದಂಬರು ಆಡಳಿತಾತ್ಮಕ ಭಾಷೆಯಾಗಿ ಕನ್ನಡವನ್ನು ಉಪಯೋಗಕ್ಕೆ ತಂದುದಕ್ಕೆ ಸಾಕ್ಷಿಯಾಗಿದೆ.

ರಾಜಾ ಭಗೀರಥನ ಕಾಲದ ಶ್ರೀ ಮತ್ತು ಬಾಗಿ ಎಂಬ ಕನ್ನಡ ಶಬ್ಧಗಳಿರುವ ಬಂಗಾರದ ನಾಣ್ಯವೂ ದೊರಕಿದೆ. ಈಚೆಗೆ ಬನವಾಸಿಯಲ್ಲಿ ದೊರಕಿದ ಐದನೆಯ ಶತಮಾನದ ತಾಮ್ರದ ನಾಣ್ಯದಲ್ಲಿಯೂ 'ಶ್ರೀಮಾನರಾಗಿ' ಎಂಬ ಕನ್ನಡ ಶಬ್ಧವಿದ್ದು ಕದಂಬರ ಕಾಲದಲ್ಲಿ ಕನ್ನಡ ಆಡಳಿತ ಭಾಷೆಯಾಗಿತ್ತು ಎಂಬುದನ್ನು ಇನ್ನಷ್ಟು ಪುಷ್ಟಿಗೊಳಿಸುತ್ತದೆ.

ತಾಳಗುಂದ ಶಾಸನದ ಪ್ರಕಾರ ತಾಳಗುಂದದ ನಿವಾಸಿ ಮಯೂರವರ್ಮ ತನ್ನ ಗುರು ವೀರವರ್ಮನೊಂದಿಗೆ ಕ್ರಿ.ಶ.345ರಲ್ಲಿ ವೈದಿಕ ವಿದ್ಯಾರ್ಜನೆಗಾಗಿ ಕಂಚಿಗೆ ಹೋಗುತ್ತಾನೆ. ಅಲ್ಲಿ ಕಾವಲ ಭಟರೊಂದಿಗೆ ಮನಸ್ತಾಪವಾಗಿ, ಅವರಿಂದ ಅವಮಾನಿತನಾಗುತ್ತಾನೆ. ಇದರಿಂದ ಕೋಪಿತಗೊಂಡು, ಪ್ರತೀಕಾರದ ಪ್ರತಿಜ್ಞೆಗೈದು, ಕಂಚಿಯನ್ನು ಬಿಟ್ಟು ವಾಪಸ್ಸು ಬರುತ್ತಾನೆ. ತನ್ನ ಬ್ರಾಹ್ಮಣತ್ವಕ್ಕೆ ತಿಲಾಂಜಲಿ ನೀಡಿ ಶಸ್ತ್ರಾಭ್ಯಾಸ ಪ್ರಾರಂಭಿಸುತ್ತಾನೆ. ತನ್ನ ಬಂಟರೊಂದಿಗೆ ಸೈನ್ಯ ಕಟ್ಟಿ ಶ್ರೀಶೈಲದ ಯುದ್ಧದಲ್ಲಿ ಪಲ್ಲವರನ್ನು ಸೋಲಿಸುತ್ತಾನೆ.

ಹೀಗೆ ಅಪಮಾನದ ಸೇಡು ತೀರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಕರ್ನಾಟಕದ ಮೊಟ್ಟ ಮೊದಲ ರಾಜ್ಯ ಸ್ಥಾಪನೆಯಾಯಿತು.

**– ಶ್ರೀ ನಂದೀಶ ಆರ್**
ಸಹಾಯಕ ಪ್ರಾಧ್ಯಾಪಕರು
ಇತಿಹಾಸ ವಿಭಾಗ



# ಒಂದು ದಿನದ ಕಾರ್ಯಾಗಾರ
## ವಿಷಯ: ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿನ ಸೂತ್ರಗಳು
## ಮತ್ತು
## ಮಾರ್ಗೋಪಾಯಗಳು – 04.10.2024















ಇತಿಹಾಸ ವಿಭಾಗ, ಎಂಟ್ರಿ ಟು ಸರ್ವೀಸ್ ಮತ್ತು ಐಕ್ಯೂಎಸಿ ಘಟಕಗಳ
ಸಂಯುಕ್ತಾಶ್ರಯದಲ್ಲಿ ಒಂದು ದಿನದ ಕಾರ್ಯಾಗಾರ
ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿನ ಸೂತ್ರಗಳು
ಮತ್ತು
ಮಾರ್ಗೋಪಾಯಗಳು
ದಿನಾಂಕ: 04.10.2024 ಶುಕ್ರವಾರ






MAINS
KUVEMPUNAGAR, MYSURU





**ಜನಪ್ರಿಯ ಕನ್ನಡ ಸುದ್ದಿವಾಹಿನಿಯಾದ ಟಿವಿ9 ನೇರ ಪ್ರಸಾರದಲ್ಲಿ**
**ವಿಶ್ವವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವದ ಜಂಬೂ ಸವಾರಿಯ ವೀಕ್ಷಕ ವಿವರಣೆ – 12.10.2024**














## ಇತಿಹಾಸ ಪರೀಕ್ಷಾ ಮಂಡಳಿ ಸಭೆ (22.10.2024)
## 2024–25 (ಬೆಸ ಚಾತುರ್ಮಾಸ)





# ಡಾ. ಶ್ರೀಧರ್‌ಗೆ ಯಂಗ್ ಅಕಾಡೆಮಿಷಿಯನ್ ಅವಾರ್ಡ್‌ಗರಿ

ಮೈಸೂರು: ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎಚ್. ಶ್ರೀಧರ್



ಅವರಿಗೆ ಯಂಗ್ ಅಕಾಡೆ ಮಿಷಿಯನ್ ಅವಾರ್ಡ್ ಲಭಿಸಿದೆ. ಕಲಾಸ್ ಸಂ ಶೋಧನಾ ಮತ್ತು ಕೌಶಲ್ಯ ತರಬೇತಿ ಸಂಘಟ ನೆ ಯು, ಎಚ್‌ಐ ಲರ್ನ್ ಎಜುಕೇಷನ್ ಟೆಕ್ ಇನ್ ಸ್ಟಿಟ್ಯೂ ಟ್ ನಲ್ಲಿ ಉನ್ನತ ಶಿಕ್ಷಣ ಹಾಗೂ ಸಂಶೋಧ ನಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸುಧೀರ್ಘ ಸೇವೆ ಮತ್ತು ಕೊಡುಗೆ ಪರಿಗಣಿಸಿ ಈ ಪ್ರಶಸ್ತಿ ನೀಡಿದೆ. ಇವರು ಮಹಾಜಲಿನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡೀನ್ ಆಗಿದ್ದು, ವಿಜಯಪುರದಲ್ಲಿ ನಡೆದ 5ನೇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.


# Young Academician Award winner



**Dr. H. Sreedhara** (Dean-Academics) and Head of the Department of History, SBRR Mahajana First Grade College, Mysuru, was honoured with 'Young Academician Award' in recognition of his long-standing service and research contribution in the field of higher education by Kala's Research and Skill Training Organisation in collaboration with HI learn Education Tech Institute, Bijapur, at the 5th International Conference held on Sept. 29.



**ಸಂಶೋಧನಾ ಪ್ರಬಂಧಗಳ ಮಂಡನೆ ಮತ್ತು ಪ್ರಕಟಣೆಗಳ ಪ್ರಮಾಣ ಪತ್ರ ಸ್ವೀಕಾರ – 19.10.2024**












## ಲೋಕಾಮಾತೆ ಅಹಲ್ಯಾಬಾಯಿ ಹೋಳ್ಕರ್ ಅವರ ಜನ್ಮ ತ್ರಿಶತಾಬ್ದಿ ದಿನಾಚರಣೆ – 07.11.2024





# 'ಐತಿಹಾಸಿಕ ಮಹಿಳೆಯರ ಬಗ್ಗೆ ಇನ್ನಷ್ಟು ಬೆಳಕು ಚೆಲ್ಲಲಿ'

### ಅಹಲ್ಯಾಬಾಯಿ ಜನ್ಮ ತ್ರಿಶತಾಬ್ದಿ ಉದ್ಘಾಟಿಸಿದ ಡಾ.ವಿ.ರಂಗನಾಥ್ ಅಭಿಮತ



ಮೈಸೂರು: ಭಾರತದ ಇತಿಹಾಸದಲ್ಲಿ ಪುರುಷರಷ್ಟೇ ಸ್ತ್ರೀಯರೂ ವಿವಿಧ ಸಾಮ್ರಾಜ್ಯಗಳ ಚುಕ್ಕಾಣಿ ಹಿಡಿದು ಅತ್ಯುತ್ತಮ ಆಡಳಿತ ನೀಡಿದ ಮಹನೀಯರ ಬಗ್ಗೆ ಸಂಶೋಧನೆ ನಡೆಸಿ ಇತಿಹಾಸದ ಪುಟಗಳಲ್ಲಿ ಬೆಳಕು ಚೆಲ್ಲುವ ಅನಿವಾರ್ಯತೆ ಇದೆ ಎಂದು ನಿವೃತ್ತ ತಹಸಿಲ್ದಾರ್ ಡಾ.ವಿ.ರಂಗನಾಥ್ ತಿಳಿಸಿದರು.

ಲೋಕಮಾತೆ ಅಹಲ್ಯಾಬಾಯಿ ಹೋಳ್ಕರ್ ಜನ್ಮ ತ್ರಿಶತಾಬ್ದಿ ಅಂಗವಾಗಿ ನಗರದ ಒಂಟಿಕೊಪ್ಪಲಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಇತಿಹಾಸ ವಿಭಾಗ, ಐಕ್ಯೂಎಸಿ, ಮಹಿಳಾ ಸಮನ್ವಯ ಹಾಗೂ ರಾಷ್ಟ್ರಭಾರತೀ ಚಾರಿಟಬಲ್ ಟ್ರಸ್ಟ್‌ನ ಸಹಯೋಗದಲ್ಲಿ ಏರ್ಪಡಿಸಿದ್ದ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾನ್ಯ ಸೈನಿಕನ ಮಗಳಾದ ಅಹಲ್ಯಾಬಾಯಿ ದೈವಭಕ್ತಿ, ಆಧ್ಯಾತ್ಮಿಕ ಮತ್ತು ಧಾರ್ಮಿಕ ಹಾಗೂ ಲೋಕ ಕಲ್ಯಾಣದ ಚಿಂತನೆಯಿಂದಾಗಿ ಗುರುತಿಸಲ್ಪಟ್ಟಿದ್ದರು. ಇಂಧೋರ್ ಪ್ರಾಂತ್ಯದ ರಾಜ್ಯಭಾರವನ್ನು ವಹಿಸಿಕೊಂಡು ಅತ್ಯಂತ ಕಾರ್ಯ ಕ್ಷಮತೆಯಿಂದ ಆಡಳಿತ ನಡೆಸಿದರು. ನೆರೆಹೊರೆಯ ದಾಳಿಗಳನ್ನು ಅತ್ಯಂತ ಚತುರತೆಯಿಂದ ಎದುರಿಸಿ, ರಾಜ್ಯ ರಕ್ಷಿಸುವುದರ ಜೊತೆಗೆ ಸಾಮಾಜಿಕ ಕಟ್ಟುಪಾಡುಗಳಿಗೆ ತಿಲಾಂಜಲಿ ಹಾಡಿದರು ಎಂದು ತಿಳಿಸಿದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ.ಪಿ.ಜಿ.ಪುಷ್ಪರಾಣಿ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ, ಮಹಿಳಾ ಸಮನ್ವಯ ಘಟಕದ ಮೈಸೂರು ವಿಭಾಗದ ಸಂಚಾಲಕರಾದ ಲಾವಣ್ಯ, ಪದಾಧಿಕಾರಿ ಲಕ್ಷ್ಮಣ್ ಗೊರ್ಲಕಟ್ಟೆ, ನಿವೃತ್ತ ಸೈನಿಕರಾದ ದತ್ತಣ್ಣ, ನಾಗೇಂದ್ರ, ಪ್ರಾಧ್ಯಾಪಕರಾದ ಎ. ಆರ್.ಸಂದೀಶ, ಎನ್.ಜಯಲಕ್ಷ್ಮಿ ಮುಂತಾದವರು ಉಪಸ್ಥಿತರಿದ್ದರು.



# VoMC Participated in Art and Mind Fest - 07.11.2024 to 08.11.2024













# ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಚಾರಿತ್ರಿಕ ದಾಖಲೆಗಳು ಮತ್ತು ಛಾಯಾಚಿತ್ರಗಳ ಪ್ರದರ್ಶನ

## ಸ್ಥಳ: ಎಸ್.ಡಿ.ಎಂ. ಪ್ರಥಮ ದರ್ಜೆ ಕಾಲೇಜು, ಮೈಸೂರು – 09.11.2024
















### ಮಹಾಜನ ಹೈಸ್ಕೂಲು

ಮೈಸೂರು ಮಹಾಜನ ಹೈಸ್ಕೂಲಿನ ಪ್ರಥಮ ವಾರ್ಷಿಕೋತ್ಸವವು ಕಳೆದ ಗುರುವಾರ ನಡೆಯಿತು. ಡೆಪ್ಯೂಟಿ ಡೈರೆಕ್ಟರಾದ ಡಾ|| ಶಿನಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಅನೇಕ ಜನ [illegible] ಬಂದಿದ್ದರು. ಪ್ರಾರ್ಥನೆಯಾದ ನಂತರ ಮಾಸ್ಟರ್ ದೊರೆಸ್ವಾಮಿಯವರ ವೀಣಾವಾದನವಾಯಿತು. ಹೆಡ್ಮಾಸ್ಟರು ವರದಿಯನ್ನೋದಿ ಮಹಾಜನರ ಸಹಾಯದಿಂದ ಈ ಸ್ಕೂಲು ದಿನೇ ದಿನೇ ಹೇಗೆ ಪ್ರವರ್ಧಮಾನವಾಗುತ್ತಿದೆಯೆಂಬುವನ್ನು ತಿಳಿಸಿದರು. ಅಲ್ಲದೆ ಪ್ರತಿಯೊಂದು ಬಾಬನಲ್ಲಿಯೂ ಮಿತವ್ಯಯವನ್ನು ಆಚರಿಸಿ ಬಹಳ ಕಡಿಮೆ ಖರ್ಚಿನಲ್ಲಿ ಸ್ಕೂಲನ್ನು ನಡೆಸುತ್ತಿರುವ ಅಂಶವನ್ನು ಹೃದಯಂಗಮವಾಗಿ ವರ್ಣಿಸಿದರು. ಬಹುಮಾನಗಳ ವಿನಿಯೋಗವಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೈಸ್ಕೂಲು ಆಡಳಿತಗಳು ಖಾಸಗಿ ಜನರ ಮೇಲ್ವಿಚಾರಣೆಯಲ್ಲಿರುವುದೇ ಲೇಸೆಂದು ಹೇಳಿದರು.

ಧನ್ಯವಾದಗಳೊಡನೆ ಸಭೆ ಮುಗಿಯಿತು.

ಮಹಾಜನ ಹೈಸ್ಕೂಲಿನ
ಪ್ರಥಮ ವಾರ್ಷಿಕೋತ್ಸವದ ವರದಿ. 1938